ಹಿತ್ತಲ ಗಿಡ

ಚಾತುರ್ಮಾಸಿಕ
ಪೈರು 8, ಕೊಯಿಲು 3, ಸೆಪ್ಟೆಂಬರ್ - ಡಿಸೆಂಬರ್, 2002

ರೈತ, ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಕರ್ನಾಟಕದ ಹೆಮ್ಮೆಯ ಅನುಶೋಧಕರಿಗೆ ರಾಷ್ಟ್ರಪತಿಗಳಿಂದ ಪುರಸ್ಕಾರ



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕೀಯ

ಪರಿಸರ ಸಂರಕ್ಷಣೆ, ಅರಣ್ಯ ನಾಶ, ತಂತ್ರಜ್ಞಾನದ ಸೂಕ್ತತೆ, ಜೀವ ವೈವಿಧ್ಯ ಸಂರಕ್ಷಣೆ, ಇತ್ಯಾದಿ ಗ್ರಾಮೀಣ ಭಾರತವನ್ನು ಕಾಡುತ್ತಿರುವ ವಿಚಾರಗಳಲ್ಲಿ ದೇಶದಲ್ಲಿಂದು ಎಡೆಬಿಡದ ಚರ್ಚೆ ಮತ್ತು ಚಟುವಟಿಕೆಗಳು ನಡೆಯುತ್ತಿದ್ದು ರಾಜ್ಯ ವ್ಯವಸ್ಥೆ ಇವಕ್ಕೆ ಸ್ಪಂದಿಸುವಂತೆ ಮಾಡುತ್ತಿವೆ. ಇವೆಲ್ಲಾ ತೀವ್ರ ಗತಿಯಲ್ಲಿ ರೂಪಗೊಳ್ಳುತ್ತಿರುವ ಒಂದು ನೈಜ ಜನತಂತ್ರದ ಲಕ್ಷಣಗಳೆನ್ನಬಹುದು.

ಅರಣ್ಯ ರಕ್ಷಣೆ ಮತ್ತು ನ್ಯಾಯಾಲಯ:

ಅರಣ್ಯ ಸಂರಕ್ಷಣಾ ವಿಚಾರದಲ್ಲಿಂದು ಉಚ್ಚ ನ್ಯಾಯಾಲಯದಿಂದ ಎರಡು ಮಹತ್ವದ ತೀರ್ಪುಗಳು ಹೊರಬಿದ್ದಿವೆ. ಪಶ್ಚಿಮ ಘಟ್ಟದಂತ ಅತ್ಯಂತ ನಾಜೂಕಿನ ಪರಿಸರ ವಲಯವನ್ನು ಇತಿಮಿತಿ ಇಲ್ಲದ ಗಣಿಗಾರಿಕೆಯಿಂದ ರಕ್ಷಿಸಲು ಕುದುರೆಮುಖಿ ಅದಿರು ಕಂಪನಿ ತನ್ನ ಚಟುವಟಿಕೆಯನ್ನು 2005ರ ಅಂತ್ಯದೊಳಗೆ ನಿಲ್ಲಿಸುವಂತೆ ಶ್ರೇಷ್ಠ ನ್ಯಾಯಾಲಯ ಗಡುವು ನೀಡಿದೆ. ಇದು ಪರಿಸರ ಪರ ಹೋರಾಟಗಾರರಿಗೆ ಸ್ವಲ್ಪ ದೀರ್ಘ ಎನಿಸಿದರೂ ಈ ಗಣಿಗಾರಿಕೆಯಲ್ಲಿ ನಿರತರಾಗಿರುವ ಸಾವಿರಾರು ಕಾರ್ಮಿಕರ ಜೀವನ ಭದ್ರತೆ ವಿಚಾರವನ್ನು ಗಮನಿಸಿದಲ್ಲಿ ಈ ತೀರ್ಪು ಯೋಗ್ಯವಾದದ್ದೇ ಎನ್ನಬಹುದು.

ಇದೇ ರೀತಿ ದೇಶದಲ್ಲಿ ಇದುವರೆಗೂ ಒತ್ತುವರಿಯಾಗಿ ಮಾಡಿರುವ ಸುಮಾರು 12.50 ಲಕ್ಷ ಹೆಕ್ಟೇರ್ ಅರಣ್ಯ ಭೂಮಿಯನ್ನು ಅತಿಕ್ರಮಣಕಾರರಿಂದ ಮುಂಬರುವ ಮೇ ತಿಂಗಳ ಅಂತ್ಯದೊಳಗೆ ಬಿಡಿಸಬೇಕೆಂದು ಶ್ರೇಷ್ಠ ನ್ಯಾಯಾಲಯ ರಾಜ್ಯ ಸರ್ಕಾರಗಳಿಗೆ ಕಟ್ಟೆಚ್ಚರಿಕೆ ನೀಡಿದೆ. ಕರ್ನಾಟಕದಲ್ಲೇ ಈ ರೀತಿ ಅತಿಕ್ರಮಣಗೊಂಡ ಅರಣ್ಯ ಭೂಮಿ ಸುಮಾರು ಒಂದು ಲಕ್ಷ ಹೆಕ್ಟೇರುಗಳಿರುತ್ತದೆ. ಧೀರ್ಘಾವಧಿ ಅರಣ್ಯ ರಕ್ಷಣೆ ವಿಚಾರದಲ್ಲಿ ಇದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದ್ದರೂ ಕೂಡ ಬಡಜನತೆ, ಅರಣ್ಯವಾಸಿಗಳು ಬುಡಕಟ್ಟು ಜನಾಂಗಗಳ ಜೀವನ ಭದ್ರತೆ ವಿಚಾರದಲ್ಲಿ ಮಾತ್ರ ಈ ತೀರ್ಪನ್ನು ಸ್ವಲ್ಪ ಸಡಿಲಗೊಳಿಸಬಹುದಾಗಿದೆ. ಇದೇ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ಹಳ್ಳಿಗಾಡಿನ ಜೀವನಾಡಿಗಳಂತಿರುವ ಕೆರೆ, ಕಟ್ಟೆ, ಗೋಮಾಳ, ಗುಂಡುತೋಪು, ಬೀಳು ಭೂಮಿ ಮೊದಲಾದ "ಸಮುದಾಯ ಒಡೆತನ" (Common Property)ದ ಭೂಪ್ರದೇಶಗಳ ಒತ್ತುವರಿ ವಿಚಾರದಲ್ಲೂ ತೆಗೆದುಕೊಳ್ಳುವುದು ಅತ್ಯವಶ್ಯಕವಾಗಿದೆ.

ಜೀವ ವೈವಿಧ್ಯ ಸಂರಕ್ಷಣೆ ಕಾಯಿದೆ ಮತ್ತು ಕಾರ್ಯ ಯೋಜನೆಗಳು:

ತೃತೀಯ ಜಗತ್ತಿನ ಅತ್ಯಂತ ಪ್ರಮುಖ ಸಂಪತ್ತಾಗಿರುವ ಜೀವ ವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯಲ್ಲಿ ಭಾರತ ಜಗತ್ತಿನ ಬೇರಾವುದೇ ದೇಶ ಮಾಡಿರದ ಸಾಧನೆ ನಡೆಸಿರುತ್ತದೆ. ರಾಷ್ಟ್ರದ ಜೀವ ವೈವಿಧ್ಯದ ಸಮಗ್ರ ರಕ್ಷಣೆಗೆ ನಮ್ಮ ಪಾರ್ಲಿಮೆಂಟು ಇತ್ತೀಚೆಗೆ "ಜೀವ ವೈವಿಧ್ಯ ಮಸೂದೆ 2000" ವನ್ನು ಅಂಗೀಕರಿಸಿರುತ್ತದೆ. ಈ ಮಸೂದೆ ಕಾರ್ಯ ರೂಪಕ್ಕೆ ಬಂದು ದೇಶದಲ್ಲಿ ಜೀವ ವೈವಿಧ್ಯ ಸಂರಕ್ಷಣೆ ಮಾತ್ರವಲ್ಲ ಇದರ ಸಮಾನವೂ ಸುಸ್ಥಿರವೂ ಆದ ಬಳಕೆಗೆ ವಿವಿಧ ಸ್ಥರಗಳಲ್ಲಿ ಅನುಷ್ಠಾನಗೊಳ್ಳಬೇಕಾದಂತಹ ರಾಷ್ಟ್ರೀಯ ಜೀವ ವೈವಿಧ್ಯ ಕಾರ್ಯಸೂಚಿ ಮತ್ತು ಯೋಜನೆಗಳು (National Bio-diversity Strategy and Action Plans) ಇದೀಗ ರೂಪುಗೊಳ್ಳುತ್ತಿವೆ.

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore
SRISTI (Society for Research and Initiatives for Sustainable Technologies and Institutions), Ahmedabad
NIF (National Innovation Foundation, India), New Delhi

ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯಗಳ ಸಹಯೋಗದಲ್ಲಿನಡೆಯುತ್ತಿರುವ ಈ ಕಸರತ್ತು ವಿಶ್ವದಲ್ಲೇ ಅತ್ಯಂತ ವಿಸ್ತೃತವೂ, ಸಮಾಜದ ವಿವಿಧ ಸ್ತರದ ಜನರನ್ನು ತೊಡಗಿಸಿಕೊಂಡ ಅಷ್ಟೇ ಸಹಭಾಗಿತ್ವದ್ದೂ ಆಗ್ಗಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಇನ್ನು ನಮ್ಮ ತಳಿ, ಬೀಜದ ಮೇಲಿನ ಸ್ವಾಮ್ಯ ಕಾಪಾಡುವ ನಿಟ್ಟಿನಲ್ಲಿ ರೂಪಗೊಂಡಿರುವ "ಸಸ್ಯ ತಳಿರಕ್ಷಣೆ ಮತ್ತು ರೈತ ಹಕ್ಕಿನ ಮಸೂದೆ" (Plant Variety Protection & Farmers Rights Act) ಅಂತೂ ಗ್ಯಾಟ್ ಬಗೆಗಿನ ಹಲವಾರು ಆತಂಕಗಳನ್ನು ಬದಿಗೊತ್ತಿ, ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿರುವವರನ್ನೂ ಸುಮ್ಮನಿರಿಸುವಂತೆ ಮಾಡಿದೆ. ಈ ಮಸೂದೆ ಮೊಟ್ಟ ಮೊದಲ ಬಾರಿಗೆ ನಮ್ಮ ರೈತರನ್ನು ತಳಿಶಾಸ್ತ್ರಜ್ಞ (breeder) ಎಂದು ಗುರುತಿಸಿ ಅವರು ವೈಯಕ್ತಿಕ ಅಥವಾ ಸಮುದಾಯ ಮಟ್ಟದಲ್ಲಿ ಸಂರಕ್ಷಿಸಿಕೊಂಡು ಅಭಿವೃದ್ಧಿ ಪಡಿಸಿದ ತಳಿಗಳ ಮೇಲೆ ಬೇರೆ ವಾಣಿಜ್ಯ ತಳಿಗಳ ರೀತಿಯಲ್ಲೇ ನೋಂದಣಿ ಮತ್ತು ಲಾಭ ಹಂಚಿಕೆಯ ಅಧಿಕಾರ ಪಡೆಯುವಂತಾಗಿರುವರು. ಇದು ತೃತೀಯ ಜಗತ್ತಿನ ರೈತ ತಳಿ, ಬೀಜ ಮತ್ತು ಕೃಷಿ ಆಧಾರಿತ ಜೀವ ವೈವಿಧ್ಯವನ್ನು ಶತಮಾನಗಳಿಂದ ಸಂರಕ್ಷಿಸಿಕೊಂಡು ಬಂದಿರುವುದನ್ನು ಗುರುತಿಸಿರುವುದು ಮಾತ್ರವಲ್ಲ ಅದಕ್ಕೆ ಪ್ರತಿಫಲವಾಗಿ ನೀಡಿರುವ ಒಂದು ದಿಟ್ಟ ಕ್ರಮವಾಗಿರುತ್ತದೆ. ನಮ್ಮ ಪಾರಂಪರಿಕ ಮತ್ತು ದೇಶೀಯ ಜ್ಞಾನ ಮತ್ತು ತಂತ್ರಜ್ಞಾನಗಳ ಬಗೆಗೂ ಇದೇ ರೀತಿಯ ಮಸೂದೆ ತಯಾರಿಸಲು ಪ್ರಯತ್ನ ನಡೆಯುತ್ತಿದೆ. ನಮ್ಮ ತೃತೀಯ ಜಗತ್ತಿನ 'ಆಸ್ತಿ'ಗಳ ಸಂರಕ್ಷಣೆಯ ವಿಚಾರದಲ್ಲಿ ಭಾರತದ ಈ ಎಲ್ಲಾ ಪ್ರಯತ್ನಗಳು ಬಹಳ ಮಹತ್ವದ್ದಾಗಿರುತ್ತವೆ.

ಜೈವಿಕ ತಂತ್ರಜ್ಞಾನದ ಬಗೆಗಿನ ಕಟ್ಟೆಚ್ಚರ:

ಕೃಷಿ ತಂತ್ರಜ್ಞಾನದ ಸೂಕ್ತತೆಯ ಬಗ್ಗೆ ಭಾರತದಂತಹ ಪ್ರಗತಿಶೀಲ ರಾಷ್ಟ್ರ ಒಂದರಲ್ಲಿ ನಡೆಯುತ್ತಿರುವ 'ಸಾಮಾಜಿಕ ತನಿಖೆ' (social scrutiny) ಬೆರಗುಗೊಳಿಸುವಂತಹದ್ದಾಗಿರುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ತಂತ್ರ ಕುತಂತ್ರಗಳ ಮುಖೇನ ಜೈವಿಕ ತಂತ್ರಜ್ಞಾನವನ್ನು ಭಾರತೀಯ ಕೃಷಿಯಲ್ಲಿ ತಳ ಊರುವಂತೆ ಮಾಡಲು ಶತಾಯ ಗತಾಯ ಪ್ರಯತ್ನ ನಡೆಸುತ್ತಿವೆ. ಆದರೆ ಇದರಿಂದ ಪರಿಸರ, ಆಹಾರ ವ್ಯವಸ್ಥೆ ಮತ್ತು ಸಾಮಾಜಿಕ ಅಸಮತೆಗಳ ಮೇಲಾಗುವ ದುಷ್ಪರಿಣಾಮಗಳನ್ನು ಗ್ರಹಿಸಿದ ನಮ್ಮ ಸಂಘಟಿತ ರೈತರು ಮತ್ತು ನಾಗರೀಕ ಸಮಾಜದ ಒಂದು ಪ್ರಜ್ಞಾವಂತ ವರ್ಗ ಕೃಷಿ ವಲಯದಲ್ಲಿ ಜೈವಿಕ ತಂತ್ರಜ್ಞಾನದ ಪ್ರಯೋಗದ ವಿರುದ್ಧ ಅಷ್ಟೇ ತೀವ್ರ ಪ್ರತಿರೋಧ ಒಡ್ಡುತ್ತಿವೆ. ಇದರ ಪರಿಣಾಮವಾಗಿ ಜೈವಿಕವಾಗಿ ವಿಕೃತಗೊಂಡ ಬಿಟಿ ಹತ್ತಿತಳಿ ಪ್ರಥಮ ಹಂತದಲ್ಲೇ ಮುಗ್ಗರಿಸುವಂತಾಯ್ತು. ಮತ್ತೊಂದು ವಿಕೃತ ಬೆಳೆ ಸಾಸಿವೆಯ ಪ್ರಯೋಗಕ್ಕೆ ಅನುಮತಿ ನೀಡಿಕೆ ಮುಂದೂಡಲ್ಪಟ್ಟಿದ್ದು ಮಾತ್ರವಲ್ಲ ಇದರಿಂದ ಅಧಿಕ ಇಳುವರಿ ದೊರೆಯುತ್ತದೆ ಎನ್ನುವ ವಿಚಾರವನ್ನು ಭಾರತೀಯ ಕೃಷಿ ಸಂಶೋಧನಾ ಅನುಸಂಧಾನದ ಮುಖ್ಯಸ್ಥ ಡಾ. ಮಂಗಳಾ ರೈಯವರೇ ನೇರವಾಗಿ ಅಲ್ಲಗಳೆದಿರುವರು. ಇದೀಗ ಆಹಾರ ನೆರವಿನ ನೆವದಲ್ಲಿ ಜೈವಿಕವಾಗಿ ಮಾರ್ಪಾಟುಗೊಂಡಿರುವ ಸೋಯಅವರೆ ಮತ್ತು ಜೋಳಗಳು ಅಮೇರಿಕಾ ದೇಶದಿಂದ ಭಾರತವನ್ನು ಪ್ರವೇಶಿಸಲು ಹವಣಿಸುತ್ತಿವೆ. ನಮ್ಮ ಕೆಲ ಪ್ರಜ್ಞಾವಂತ ವಿಜ್ಞಾನಿ ಮತ್ತು ಬುದ್ಧಿ ಜೀವಿ ವರ್ಗದ ತತ್‌ಕ್ಷಣದ ಪ್ರತಿರೋಧದಿಂದ ಕೇಂದ್ರ ಸರ್ಕಾರ ಈ ಆಹಾರ ಉತ್ಪನ್ನಗಳ ಪ್ರವೇಶಕ್ಕೂ ತಾತ್ಕಾಲಿಕ ನಿರ್ಬಂಧ ವಿಧಿಸಿದೆ. ಕೃಷಿಯೊಳಗೆ ಜೈವಿಕ ತಂತ್ರಜ್ಞಾನದ ಪ್ರಯೋಗಕ್ಕೆ ತುದಿಗಾಲಿನ ಮೇಲೆ ಕರ್ನಾಟಕ ನಿಂತಿದ್ದರೂ, ಈ ಎಲ್ಲಾ ಚರ್ಚೆ ಪ್ರತಿರೋಧಗಳಿಗೆ ಸ್ಪಂದಿಸಿರುವ ನಮ್ಮ ರಾಜ್ಯದ ಮಾನ್ಯ ಕೃಷಿ ಸಚಿವರು ಇದೀಗ ಎಚ್ಚರಿಕೆಯ ಮಾತನಾಡುತ್ತಿರುವರು. ನಮ್ಮ ರಾಜ್ಯದಲ್ಲಿ ಬಿಟಿ ಹತ್ತಿತಳಿ ಅಷ್ಟೇನೂ ಫಲಕಾರಿಯಾಗಿಲ್ಲ ಎಂದು ಒಪ್ಪಿಕೊಂಡ ನಮ್ಮ ಕೃಷಿ ಸಚಿವರು ಇದರ ಸಾರಾಸಗಟು ಬಳಕೆಯ ವಿಚಾರವನ್ನು ಮರುಪರಿಶೀಲಿಸುವುದಾಗಿ ಹೇಳಿರುವರು.

ಛತ್ತೀಸ್‌ಘಡದ ಇಂದಿರಾಗಾಂಧಿ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ನಮ್ಮ ಅತ್ಯಂತ ಗೌರವಾನ್ವಿತ ಕೃಷಿ ವಿಜ್ಞಾನಿ ದಿವಂಗತ ಡಾ. ರಚಾರಿಯಾ ಕಷ್ಟಪಟ್ಟು ಸಂರಕ್ಷಿಸಿಟ್ಟಿರುವ ಭತ್ತದ ತಳಿಗಳನ್ನು ಕಿತ್ತುಕೊಳ್ಳುವ ಸಿಂಜೆಂಡಾ ಬಹುರಾಷ್ಟ್ರೀಯ ಕಂಪನಿಯ ಪ್ರಯತ್ನಕ್ಕೆ ಪ್ರಾರಂಭದಲ್ಲೇ ಕಪಾಳ ಮೋಕ್ಷವಾಗಿರುತ್ತದೆ.

ಜೈವಿಕ ತಂತ್ರಜ್ಞಾನದಂತಹ ಪ್ರಖರವೂ ಅಷ್ಟೇ ನಾಜೂಕಿನದ್ದೂ ಆದ ತಂತ್ರಜ್ಞಾನವನ್ನು ಬಳಸುವ ವಿಚಾರದಲ್ಲಿ ನಡೆಯುತ್ತಿರುವ ಈ ರೀತಿಯ ಚರ್ಚೆ, ಪ್ರತಿರೋಧ, ಮತ್ತಿತರ ವಿದ್ಯಮಾನಗಳು ನಮ್ಮ ಕೃಷಿ ಮತ್ತು ಗ್ರಾಮೀಣ ಭಾರತದ ಧೀರ್ಘಾವಧಿ ಸುಸ್ಥಿರ ಅಭಿವೃದ್ಧಿ ದೃಷ್ಟಿಯಿಂದ ಅತ್ಯಂತ ಅಗತ್ಯವಾಗಿದ್ದು ಇದು ಸ್ವಾಗತಾರ್ಹ ವಿಚಾರವಾಗಿರುತ್ತದೆ.

ಏಷ್ಯಾ ಸಾಮಾಜಿಕ ವೇದಿಕೆ:

ಬಡಜನತೆ, ಮಹಿಳೆಯರು, ರೈತರು, ಕಾರ್ಮಿಕರು, ಬುಡಕಟ್ಟು ಜನಾಂಗಗಳ ಇವೇ ಮೊದಲಾದ ತುಳಿತಕ್ಕೊಳಗಾದ ಜನತೆಯ ಏಷ್ಯಾಮಟ್ಟದ ಒಂದು ಬೃಹತ್ ಅಧಿವೇಶನ ಹೈದರಾಬಾದಿನಲ್ಲಿ ಇದೇ ಜನವರಿ ತಿಂಗಳ ಮೊದಲವಾರ ಜರುಗಿತು. ಸದ್ಯದ ಜಾಗತೀಕರಣ ಪ್ರಕ್ರಿಯೆಯಿಂದ ಹೇಗೆ ಈ ಜನಗಳು ಮತ್ತಷ್ಟು ತುಳಿತಕ್ಕೆ ಒಳಗಾಗುತ್ತಾರೆನ್ನುವುದು ಪ್ರಸ್ತಾಪವಾಗಿರುವುದು ಮಾತ್ರವಲ್ಲ ಇದಕ್ಕೆ ಪರ್ಯಾಯಗಳೂ ಸಾಧ್ಯವಿವೆ ಎಂಬ ಗಟ್ಟಿ ಧ್ವನಿ ಒಂದು ವಾರ ಕಾಲದ ಈ ಮಹಾಧಿವೇಶನದಲ್ಲಿ ಮೊಳಗಿರುತ್ತದೆ. ತುಳಿತಕ್ಕೊಳಪಟ್ಟಿರುವ ಜನತೆಯತ್ತ ನಮ್ಮ ಅಭಿವೃದ್ಧಿ ಯೋಜನೆಗಳು ಮತ್ತು ಜನತಂತ್ರಾತ್ಮಕ ಕಸರತ್ತುಗಳು ತಿರುಗುವಂತಾಗಲು ಈ ಏಷ್ಯಾಮಟ್ಟದ ಮಹಾಧಿವೇಶನ ಎಚ್ಚರಿಕೆ ಗಂಟೆ ಬಾರಿಸಿರುವುದರಲ್ಲಿ ಅನುಮಾನವಿರದು.

ಈ ಎಲ್ಲಾ ಆಗುಹೋಗುಗಳನ್ನು ತಮಗೆ ಸಂಬಂಧವೇ ಇಲ್ಲವೆಂಬಂತೆ ನಿರ್ಲಿಪ್ತತೆಯಿಂದ ನೋಡುತ್ತಿರುವ ನಮ್ಮ ನಗರ ಪ್ರದೇಶದ ಮಧ್ಯಮ ವರ್ಗದ ವಿದ್ಯಾವಂತರು, ಬುದ್ಧಿಜೀವಿಗಳು ಹಾಗೂ ವಿಜ್ಞಾನಿ ಸಮುದಾಯದ ಧೋರಣೆ ಮಾತ್ರ ಅರ್ಥವಾಗದಿರುವಂತಾಗಿದೆ. ಈ ನಿರ್ಣಾಯಕ ಹಂತದಲ್ಲಿ ಈ ಎಲ್ಲಾ ಭಾಗ್ಯವಂತ (privileged) ವರ್ಗಗಳು ಇಂದು ತಳಮಟ್ಟದಲ್ಲಿ ನಡೆಯುತ್ತಿರುವ ಚರ್ಚೆ ಮತ್ತು ಆಂದೋಳನಗಳೊಡನೆ ಸಕ್ರಿಯವಾಗಿ ಕೈ ಜೋಡಿಸಿ ಒಂದು ಪರಿಣಾಮಕಾರಿಯಾದ ಜನಾಭಿಪ್ರಾಯ ಮೂಡುವಂತೆ ಮಾಡಿದ್ದೇ ಆದಲ್ಲಿ ಭಾರತ ಜಗತ್ತಿನಲ್ಲೇ ಯಾರೂ ಸರಿಸಾಟಿ ಇಲ್ಲದ ಸ್ಥಾನಕ್ಕೇರುವುದರಲ್ಲಿ ಸಂಶಯವಿರದು. ಈ ವರ್ಗವನ್ನು ಬಡಿದೆಬ್ಬಿಸುವ ಕಾರ್ಯ ಇಂದು ತ್ವರಿತವಾಗಿ ಆಗಬೇಕಾಗಿದೆ.

ಹಿತ್ತಲಗಿಡ ಬಳಗದ ಸಾಧನೆ

ತಳಮಟ್ಟದ ಅನುಶೋಧಕರನ್ನು ಹುಡುಕಿ ಪುರಸ್ಕರಿಸುವ ಹಿತ್ತಲ ಗಿಡ ಬಳಗದ ಪ್ರಯತ್ನಕ್ಕೆ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದಿಂದ ಈ ಬಾರಿ ಪ್ರಥಮ ಬಹುಮಾನ ದೊರೆತಿರುತ್ತದೆ. ಈ ರೀತಿ ತಳಮಟ್ಟದಿಂದ ಎದ್ದಿರುವ ಸುಸ್ಥಿರ, ಹಸಿರು ತಂತ್ರಜ್ಞಾನಗಳು ಗಟ್ಟಿಯಾಗಿ ಕೃಷಿ ಮತ್ತು ಗ್ರಾಮೀಣ ಭಾರತದಾದ್ಯಂತ ಪಸರಿಸಬೇಕಾಗಿದೆ. ಆ ಮೂಲಕ ಆಗುವ ಪ್ರಗತಿ ತೃತೀಯ ಜಗತ್ತಿಗೇ ಹೇಳಿ ಮಾಡಿಸಿದಂತಿರುತ್ತದೆ. ಹಿತ್ತಲ ಗಿಡ ಈ ನಿಟ್ಟಿನಲ್ಲಿ ತನ್ನ ಅಲ್ಪ ಕೊಡಿಗೆ ನೀಡಲು ಶಕ್ತಿ ಮೀರಿ ಪ್ರಯತ್ನಿಸುತ್ತದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಕೋಳಿಗಳ ಅತಿ ಭೇದಿ ನಿಯಂತ್ರಣ

ಹಾಲು ಕೊರಟಿಗೆ (*Pergularia daemina*) ಹಾಗೂ ತುಪ್ಪ ಕೀರೆ (*Acalypha indica* - ಕುಪ್ಪೆಗಿಡ) ಎಲೆಗಳು ಮತ್ತು ಬೇವಿನ ಹಾಗೂ ಬಿಳಿ ಜಾಲಿ (*Acacia leucoploea*) ತೊಗಟೆಗಳನ್ನು ಚೆನ್ನಾಗಿ ಪುಡಿ ಮಾಡಿ



ತುಪ್ಪ ಕೀರೆ

ರಾಗಿ ಹಿಟ್ಟಿನೊಂದಿಗೆ ಮಿಶ್ರ ಮಾಡಿ ಕೋಳಿಗಳಿಗೆ ತಿನ್ನಿಸುವುದರಿಂದ 'ಅತಿ ಭೇದಿ' ರೋಗ (Diarrhoea) ನಿಯಂತ್ರಣ ಮಾಡಬಹುದು. ಎಂಬುದು ತಮಿಳುನಾಡಿನ ಶ್ರೀ ಬಾಲು ಶೋಧನೆ.

ಅನುಶೋಧನೆ: ಎಸ್. ಬಾಲು, ಕುಲಮಂಗಲಂ, ಪುಡುಕೊಟ್ಟೆ ಜಿಲ್ಲೆ, ತಮಿಳು ನಾಡು.

ತಮಿಳುನಾಡಿನ ಶ್ರೀಮತಿ ಕರುಪ್ಪಾಯಿ ಅವರಿಗೆ ಈಗ ಅರವತ್ತು ವರ್ಷ ವಯಸ್ಸು. ಇವರು ಹಲವು ಪ್ರಾಣಿ ಮತ್ತು ಮನುಷ್ಯ ರೋಗಗಳನ್ನು ವಾಸಿ ಮಾಡಬಲ್ಲವರಾಗಿದ್ದಾರೆ. ಸುಮಾರು 67 ಔಷಧಿ ಸಸ್ಯಗಳನ್ನು ತಮ್ಮ ತೋಟದಲ್ಲಿ ಬೆಳೆಸಿರುವ ಇವರು ಅತಿಭೇದಿಗೆ ಒಳಪಟ್ಟ ಕೋಳಿಗಳನ್ನು ಪ್ರತ್ಯೇಕಿಸಿ ಬೇರೆ ಇಡಬೇಕಾಗಿ ಸೂಚಿಸುತ್ತಾರೆ. ಅರಿಷಿಣ, ಹುಣಸೆ ಹಣ್ಣು (*Tamarindus indica*) ಮತ್ತು ಲೋಳೆ ಸರಗಳನ್ನು ಚೆನ್ನಾಗಿ ಅರೆದು ಪುಡಿ ಮಾಡಿ ಪಾಲಿಷ್ ಮಾಡಿದ ಅಕ್ಕಿಯೊಂದಿಗೆ ಬೆರೆಸಿ ಕೋಳಿಗಳಿಗೆ ತಿನ್ನಿಸಿದರೆ ಅವುಗಳ ಸಾವಿನ ಪ್ರಮಾಣವನ್ನು ತಡೆಗಟ್ಟಬಹುದು ಎಂಬುದು ಕರುಪ್ಪಾಯಿಯವರ ಅಭಿಪ್ರಾಯ.

ಬಿಳಿ ಜಾಲಿ ತೊಗಟೆಯಿಂದ ತೆಗೆದ ಸುಮಾರು ಮೂರು ಮಿ.ಲೀ. ರಸವನ್ನು ಬಾಯಿಯ ಮೂಲಕ ಕೋಳಿಗೆ ಕೊಟ್ಟಾಗ ಸುಮಾರು ನಾಲ್ಕೈದು ಗಂಟೆಗಳಲ್ಲಿ ಭೇದಿ ನಿಲ್ಲುತ್ತದೆ. ಜೊತೆಗೆ ಕೋಳಿಗಳು ಎಂದಿನಂತೆ ಆಹಾರ ಸೇವಿಸಲು ಪ್ರಾರಂಭಿಸುತ್ತವೆ ಅಲ್ಲದೆ ಚುರುಕಾಗುತ್ತವೆ ಎಂಬುದು ಸೇಲಂ ಜಿಲ್ಲೆಯ ಪಳನಿಯವರ ಶೋಧನೆ. ಇವರು ಸೇವ (SEVA) ಸಂಸ್ಥೆಯು ಆಯೋಜಿಸಿದ "ಹಸಿರು ಔಷಧಿ ಕಾರ್ಯಾಗಾರ"ದಲ್ಲಿ ಭಾಗವಹಿಸಿ ಅಲ್ಲಿ ಪಡೆದ ಜ್ಞಾನವನ್ನು ತಮ್ಮ ಹಳ್ಳಿಯಲ್ಲಿ ಪರೀಕ್ಷಿಸಿ ಯಶಸ್ವಿಯಾಗಿದ್ದಾರೆ.

ಮೂಲ: ಹನಿ ಬೀ, 13(3), ಸೆ. 2002.

ಕೋಳಿಗಳಲ್ಲಿ ಹೇನು ಹತೋಟಿ

ಕರ್ನಾಟಕ ಮತ್ತು ತಮಿಳುನಾಡಿನ ಕ್ರಮಗಳು

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ರೈತರು ಕೋಳಿ ಹೇನಿನ ಹತೋಟಿಗಾಗಿ ತಮ್ಮದೇ ಆದ ವಿಧಾನಗಳನ್ನು ಕಂಡು ಹಿಡಿದು ಅದನ್ನು ಅನುಸರಿಸುತ್ತಾ ಬಂದಿದ್ದಾರೆ. ಕೋಳಿಗಳು ಕೂರುವ ಜಾಗದಲ್ಲಿ ವಿಷಂಪುರಿ (*Clerodendron inerme*) ಸೊಪ್ಪನ್ನು ಇಡುವುದರಿಂದ, ಅಥವಾ ಧೂಪದ (*Veteria indica*) ಹೊಗೆ ಕೊಡುವುದರಿಂದ ಅಥವಾ ತಾಳೆ (*Borassus flabellizer*) ಹೂಗಳನ್ನು ಇಡುವುದರಿಂದ ಕೋಳಿ ಹೇನಿನ ಹತೋಟಿ ಸಾಧ್ಯವೆಂಬುದು ಅವರ ಅನುಭವ.

ಮೂಲ: ಲಕ್ಕಣ್ಣ ಗೌಡ, ಮುದ್ದೇಗೌಡನ ಕೊಪ್ಪಲು, ನಾಗಮಂಗಲ (ತಾ), ಮಂಡ್ಯ (ಜಿ), ಸಂಗ್ರಹ: ಮು.ಲ. ಕೆಂಪೇಗೌಡ, ನಾಗಮಂಗಲ

ತುಂಬೆ (*Leucas aspera*) ಗಿಡದ ರಸವನ್ನು ನೀರಿನಲ್ಲಿ ಬೆರೆಸಿ ಕೋಳಿಗಳ ಮೇಲೆ ಸಿಂಪಡಿಸುವುದರಿಂದ ಕೋಳಿಗಳನ್ನು ಹೇನುಗಳಿಂದ ಮುಕ್ತಗೊಳಿಸಬಹುದು ಎಂಬುದು ತಮಿಳುನಾಡಿನ ತಂಜಾವೂರು ಜಿಲ್ಲೆಯ ಶ್ರೀಮತಿ ಸೆಲ್ವಿ ಅವರ ಅನುಭವ.

ಎಕ್ಕದ (*Calotropis spp*) ಎಲೆ ಮತ್ತು ಕಾಂಡಗಳನ್ನು ಕೋಳಿಗಳು ಮಲಗುವ ಜಾಗಕ್ಕೆ ಅವುಗಳು ಬರುವ ಮೊದಲು ಇಡಿ. ರಾತ್ರಿ ವೇಳೆಯಲ್ಲಿ ಎಲೆಗಳ ಮೇಲೆ ಸಂಗ್ರಹವಾಗುವ ಹೇನುಗಳನ್ನು ಬೆಳಿಗ್ಗೆ ಎದ್ದ ತಕ್ಷಣ ನಾಶ ಮಾಡಬಹುದು. ಇದಕ್ಕೆ ಬದಲಾಗಿ ತುಳಸಿ ಬಳಸಬಹುದು. ಇದು ತಮಿಳುನಾಡಿನ ವಿರುಧು ನಗರ ಜಿಲ್ಲೆಯ ಶ್ರೀ ಎಸ್. ಕುರುಪಯ್ಯ ಅವರ ಪದ್ಧತಿ.

ಮೂಲ: ಹನಿ ಬೀ, 13(3), ಸೆ. 2002.

ಹಿತ್ತಲಗಿಡದ ಎರಡು ಸಾವಿರದ ಇಸವಿಯವರೆಗಿನ ಎಲ್ಲಾ ಸಂಚಿಕೆಗಳು ಲಭ್ಯವಿರುತ್ತವೆ. ರೂ. 350/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡ್‌ರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ನಾಗಮಂಗಲದ ರೈತರ ನಾಟೀ ಪಶುಚಿಕಿತ್ಸೆಗಳು – ರೈತ ಪದ್ಧತಿಗೆ ಪಶುವೈದ್ಯರ ಪ್ರತಿಕ್ರಿಯೆ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮುದ್ದೇಗೌಡನ ಕೊಪ್ಪಲಿನ ಲಕ್ಕಣ ಗೌಡ ಮತ್ತಿತರ ರೈತರು ತಮ್ಮ ಜಾನುವಾರುಗಳ ಕಾಯಿಲೆಗೆ ಹಲವು ನಾಟೀ ಚಿಕಿತ್ಸೆಗಳನ್ನು ಅನುಸರಿಸುತ್ತಾ ಬಂದಿರುವರು. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ. ಈ ಚಿಕಿತ್ಸೆಗಳಿಗೆ ಬೆಂಗಳೂರು ಪಶು ವೈದ್ಯಕೀಯ ಮಹಾವಿದ್ಯಾಲಯದ ವೈದ್ಯ ಡಾ. ಎನ್.ಬಿ. ಶ್ರೀಧರ್ ವೈಜ್ಞಾನಿಕ ವಿವರಣೆ (ಆವರಣದಲ್ಲಿರುವುದು) ನೀಡಲು ಪ್ರಯತ್ನಿಸಿರುವರು. ಇವರಿಗೆ 'ಹಿತ್ತಲಗಿಡ' ಕೃತಜ್ಞತೆ ಸಲ್ಲಿಸುತ್ತದೆ.

ದನ-ಎಮ್ಮೆಗಳು ಗೆರಸಿದಾಗ


ದನ-ಎಮ್ಮೆಗಳ ಬಾಯಲ್ಲಿ ಜೊಲ್ಲು, ಮೂಗಿನಲ್ಲಿ ಗೊಣ್ಣೆ ಸುರಿಯುತ್ತಿದ್ದು, ಕಾಲು ಜುಮ್ಮಿನಿಂದ ಕುಂಟಲು ಶುರು ಮಾಡಿದರೆ ಅದನ್ನು ಗೆರಸುವಿಕೆ ಎನ್ನುತ್ತಾರೆ. ಇದಕ್ಕೆ ಬಾಳೆ ಹಣ್ಣು, ಹೆಸರು ಕಾಳು (*Vigna mungo*) ಮತ್ತು ಪಚ್ಚ ಕರ್ಪೂರಗಳನ್ನು (Camphor) ತಿನ್ನಿಸುವುದರ ಜೊತೆಗೆ ಕೊತ್ತಂಬರಿ ಸೊಪ್ಪನ್ನು ಕಡಲೆ ಕಾಯಿ ಎಣ್ಣೆಯಲ್ಲಿ ಅದ್ದಿ ತಿನ್ನಿಸುವುದು ಉತ್ತಮ ಪರಿಹಾರ *(ಇವುಗಳು ಶೀತದಿಂದ ಉಂಟಾಗುವ ವಿವಿಧ ರೋಗಗಳಿಗೆ ಔಷಧಿಯಾಗಬಹುದಾದರೂ ಇವನ್ನು ಪ್ರಾಯೋಗಿಕವಾಗಿ ನಿಖರವಾದ ಕಾಯಿಲೆಗಳಲ್ಲಿ ಧೃಡಪಡಿಸಿಕೊಳ್ಳಬೇಕಾಗಿದೆ).*

ಸೆಲೆ (ಜ್ವರ) ಗೆ ಹಲವು ಔಷಧಿಗಳು

ಜ್ವರದಿಂದಾಗಿ ದನ-ಎಮ್ಮೆಗಳ ಕಿವಿ-ಕೊಂಬುಗಳು ತಣ್ಣಗಾಗುವುದನ್ನು 'ಸೆಲೆ' ಎನ್ನುತ್ತಾರೆ. ಇದಕ್ಕೆ ಪರಿಹಾರಗಳೆಂದರೆ:

★ ಇಂಗು, ವೀಳ್ಯದೆಲೆ, ಮೆಣಸು ಮತ್ತು ಬೆಳ್ಳುಳ್ಳಿಗಳನ್ನು ಅರೆದು ಬೆರೆಸಿ ತಿನ್ನಿಸುವುದು. [*ಹೀಗೆ ತಿನ್ನಿಸುವುದರಿಂದ ಸಾಮಾನ್ಯ ಜ್ವರ(Pyrexia of unknown origin) ಕಡಿಮೆಯಾಗುವ ಸಾಧ್ಯತೆಯಿರುತ್ತದೆ*].

★ ಬೇವಿನ ಸೊಪ್ಪು, ತುಂಬೆ ಸೊಪ್ಪು(*Leucas aspera*), ನುಗ್ಗೆ ಸೊಪ್ಪು (*Moringa oleifera*) ಅಥವಾ ತೆಂಗಿನ ಕಾಯಿಗಳನ್ನು ತಿನ್ನಿಸುವುದು. *(ಇವುಗಳಲ್ಲಿ ಜ್ವರ ನಿವಾರಕ ಗುಣವಿರುವುದು ವೈಜ್ಞಾನಿಕವಾಗಿ ಗೊತ್ತಾಗಿದೆ).*



ತುಂಬೆ ಗಿಡ

★ ಉಸಿರಾಟಕ್ಕೆ ತೊಂದರೆಯಾಗಿದ್ದರೆ ಮೂಗಿನಲ್ಲಿ ನೀರಾಡಲಿ ಎಂದು ಬೆಳ್ಳುಳ್ಳಿ ಸಿಪ್ಪೆಯ ಹೊಗೆಯನ್ನು ಮೂಗಿಗೆ ಹಿಡಿಯುವುದು. *(ಇದರಿಂದ ಜಾನುವಾರುಗಳಿಗೆ ಸ್ವಲ್ಪ ನೆಮ್ಮದಿ ಸಿಗಬಹುದಾಗಿರುತ್ತದೆ).*

★ ಕಾಲು ಕುಂಟು ಬಂದರೆ ದನಗಳ ಮೈಮೇಲೆ ಬೂದಿ ಕೇರುವುದು ಒಂದು ಪದ್ಧತಿ. ಇದನ್ನು ಕುಂದಕ ಕೇರುವುದು ಎನ್ನುತ್ತಾರೆ.

★ ಹೆಚ್ಚು ಸುಸ್ತಾಗಿ ದನ-ಎಮ್ಮೆಗಳು ಮೇಲೆ ಏಳದಿದ್ದ ಪಕ್ಷದಲ್ಲಿ ಲಕ್ಕಿ ಸೊಪ್ಪಿನ (*Vitex negundo*) ಚಿಗುರನ್ನು ಬಾಯಿಯಲ್ಲೇ ಕಿತ್ತು ಅಗಿದು ಮೂಗಿಗೆ ಉರುಬಿದರೆ ಅವುಗಳು ಎದ್ದು ನಿಲ್ಲುತ್ತವಂತೆ. *(ಹೀಗೆ ಮಾಡುವುದರಿಂದ ಉಂಟಾಗುವ ಉರಿತದಿಂದ ಅವು ಏಳಬಹುದು).*



ಲಕ್ಕಿ ಸೊಪ್ಪು

★ ರೋಗ ಹೆಚ್ಚು ಉಲ್ಬಣಿಸಿದ್ದರೆ 7 ರಿಂದ 8 ಎಕ್ಕದ ಎಲೆಗಳನ್ನು (*Calotropis sp.*) ತಿನ್ನಿಸುವುದು. *(ಆದರೆ ಎಕ್ಕದ ಎಲೆಗಳನ್ನು ಜಾಸ್ತಿ ತಿನ್ನಿಸಿದರೆ ಅವು ಜಾನುವಾರುಗಳಿಗೆ ವಿಷಕಾರಿ. ಆದ್ದರಿಂದ ಬಳಕೆಯಲ್ಲಿ ಎಚ್ಚರ ವಹಿಸಬೇಕು).*

ಹೊಟ್ಟೆ ಉಬ್ಬರಕ್ಕೆ ಆಡು ಮುಟ್ಟದ ಸೊಪ್ಪು

ಕುರಿ-ಮೇಕೆಗಳು ಹುಳು ತಿನ್ನುವುದರಿಂದ ಅಥವಾ ಇತರ ಕಾರಣಗಳಿಂದ ಹೊಟ್ಟೆ ಉಬ್ಬರ ಬಂದರೆ ಕತ್ತಾಲ್ ಹೊಂಬು ಅಥವಾ ಆಡುಮುಟ್ಟದ ಸೊಪ್ಪನ್ನು (*Tylophora asthmatica*) ತಿನ್ನಿಸಿ ಒಂದು ಹೊಂಬನ್ನು ಹೊಟ್ಟೆಗೆ ಕಟ್ಟುವುದರಿಂದ ಹೊಟ್ಟೆ ಉಬ್ಬರ ವಾಸಿಯಾಗುತ್ತದೆ. *(ಆಡು ಮುಟ್ಟದ ಸೊಪ್ಪು ವಿವಿಧ ಜಾನುವಾರು ಕಾಯಿಲೆಗಳಿಗೆ ಔಷಧ ಎಂದು ಪಶು ವೈದ್ಯರು ಒಪ್ಪುತ್ತಾರೆ).*

ಕಾಲು ಮುರಿದಾಗ

ಕೆಮ್ಮಣ್ಣು, ಕೋಳಿ ಮೊಟ್ಟೆಗಳನ್ನು ಅಂಟು ತೊಗರಿ (*Atylosia trinervia*) ಸೊಪ್ಪಿನೊಂದಿಗೆ ಅರೆದು ಆ ಮಿಶ್ರಣದಲ್ಲಿ ಒಂದು ಬಟ್ಟೆಯನ್ನು ಅದ್ದಿ ಮುರಿದ ಜಾಗಕ್ಕೆ ಬಿದಿರಿನ ದಬ್ಬೆಗಳ ಸಹಾಯದಿಂದ ಕಟ್ಟಿದರೆ ಸುಮಾರು ನಾಲ್ಕು ವಾರಗಳಲ್ಲಿ ಕಾಲು ಕೂಡಿಕೊಳ್ಳುತ್ತದೆ ಎನ್ನುತ್ತಾರೆ ಲಕ್ಕಣ್ಣ ಗೌಡರು. *(ಈ ಮಿಶ್ರಣವು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಂತೆ ವರ್ತಿಸಬಹುದು ಹಾಗೂ ಈ ರೀತಿ ಕಾಲು ಅಲುಗಾಡದಂತೆ ಕಟ್ಟಿದರೆ ಅದರಿಂದ ಮುರಿದ ಕಾಲು ಸರಿಯಾಗಲು ಮತ್ತಷ್ಟು ಸಹಕಾರಿಯಾಗಬಹುದು).*

ಹುಳು ಬಿದ್ದರೆ

ಯಾವುದೇ ಸಾಕು ಪ್ರಾಣಿಗಳಿಗೆ ಗಾಯಗಳಾಗಿ ಹುಳು ಬಿದ್ದರೆ ನುಸಿ ಗುಳಿಗೆ (ಬಟ್ಟೆ ಸುವಾಸನೆ ಬರಲಿ ಎಂದು ಇಡುವ ಉಂಡೆ) ಯನ್ನು ಪುಡಿ ಮಾಡಿ ನಶ್ಯ (snuff) ದೊಂದಿಗೆ ಬೆರೆಸಿ, ಹುಳುಗಳನ್ನು ತೆಗೆದು ಆ ಜಾಗಕ್ಕೆ ಈ ಮಿಶ್ರಣವನ್ನು ತುಂಬ ಬೇಕು. ಇದರಿಂದ ಹುಳುಗಳು ಸತ್ತು ಗಾಯ ಗುಣಮುಖವಾಗುತ್ತದೆ. ಇದರ ಜೊತೆಗೆ ಬೇವಿನ ಎಣ್ಣೆ ಅಥವಾ ಹೊಂಗೆ ಎಣ್ಣೆಯನ್ನು ಹಚ್ಚುವುದರಿಂದ ನೊಣ ಕೂರದಿರಲು ಮತ್ತು ಗಾಯ ಮಾಗಲು ನೆರವಾಗುತ್ತದೆ. *(ನುಸಿ ಗುಳಿಗೆಗೆ ಕೀಟನಾಶಕ ಗುಣವಿರುವುದು ತಿಳಿದು ಬಂದಿದೆ).*

ಸಂಗ್ರಹ: ಮು.ಲ. ಕೆಂಪೇ ಗೌಡ, ನಾಗಮಂಗಲ

ಬೆಳೆಗಳಿಗೊಂದು ಬಸವರಾಜು ಸಂತೇಶಿವರರ 'ಕಷಾಯ'

ಮನುಷ್ಯರಿಗೆ ಚಳಿ, ಕೆಮ್ಮು, ಜ್ವರ ಬಂದಾಗ ಹಳ್ಳಿಗಾಡುಗಳಲ್ಲಿ ಕಷಾಯ ಔಷಧಿ ಕೊಡುವುದು ತಿಳಿದಿರಬಹುದು. ಆದರೆ ಬೆಳೆಗಳಿಗೆ ಕಷಾಯ ಕೊಡುವುದನ್ನು ಯಾರೂ ಕೇಳಿರಲಾರರು. ಹಾಸನದ ನಮ್ಮ ಸಾವಯವ ಕೃಷಿ ಪ್ರವೀಣ ಬಸವರಾಜ ಸಂತೇಶಿವರರು ಈ ಪ್ರಯೋಗವನ್ನು ನಡೆಸಿ ಬೆಳೆಗಳ ಸರ್ವ ರೋಗಕ್ಕೊಂದು ಕಷಾಯ ಕಂಡು ಹಿಡಿದಿರುವರು. ಈ ಕಷಾಯದ ತಯಾರಿಕೆ ಈ ಕೆಳಕಂಡಂತಿದೆ:

ಸುಮಾರು 100 ಲೀಟರ್ ಸಾಮರ್ಥ್ಯವುಳ್ಳ ಸಿಮೆಂಟಿನ ತೊಟ್ಟಿಗೆ ಗಂಜಲ, ಸಗಣಿ, ಕಳೆ ಗಿಡಗಳು, ಬೇವಿನೆಲೆ, ಹೊಂಗೆ ಎಲೆ, ಲ್ಯಾಂಟನಾ (ಕಮ್ಯುನಿಸ್ಟ್ ಗಿಡ) ಎಲೆ, ತಂಗಡಿ (*Cassia sp.*) ಎಲೆ, ವಿಷಂಪುರಿ (*Clerodendron inerme*) ಎಲೆ, ಆಲದ ಹಣ್ಣು, ಅತ್ತಿ ಹಣ್ಣು, ಅರಳಿ ಹಣ್ಣು ಮತ್ತು ಗೋಣಿ ಹಣ್ಣುಗಳನ್ನು ಹಾಕಿ ನಂತರ ತೊಟ್ಟಿ ಭರ್ತಿಯಾಗುವಂತೆ ನೀರನ್ನು ತುಂಬಬೇಕು. ಒಂದು ತಿಂಗಳ ನಂತರ ಇದು ಕೊಳೆಯಲ್ಪಟ್ಟು, ಕೊಳೆತ ಘನಭಾಗ ತೊಟ್ಟಿಯ ತಳಭಾಗದಲ್ಲಿ ಶೇಖರವಾಗಿರುತ್ತದೆ. ಆಗ ಅದನ್ನು ನೀರಿನೊಂದಿಗೆ ಚೆನ್ನಾಗಿ ಮಿಶ್ರ ಮಾಡಿದರೆ ಕಷಾಯ ತಯಾರಾಗುತ್ತದೆ. ಈ ಕಷಾಯದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ 13 ಪೋಷಕಾಂಶಗಳೂ ಇರುವುದಾಗಿಯೂ ಸಂತೇಶಿವರರ ಅಭಿಪ್ರಾಯ. ಹೀಗೆ ತಯಾರಾದ ಕಷಾಯವನ್ನು ಮುಂದೆ ತಿಳಿಸಿದಂತೆ ಬಳಸಬಹುದು.

★ ಭತ್ತದ ನಾಟಿಯಾದ 15 ದಿನಗಳ ನಂತರ ಕಷಾಯ ಸಿಂಪಡಣೆ ಮಾಡಿದರೆ ಭೂಮಿಯಲ್ಲಿ ಕೊರತೆಯಿರುವ ಪೋಷಕಾಂಶಗಳು ದೊರೆತು ಬೆಳೆ ಕಂಗೊಳಿಸುತ್ತದೆ. ಭತ್ತದ ಬೆಳೆ ತಿಳಿ ಹಸಿರು ಬಣ್ಣಕ್ಕೆ ಬಂದಾಗ ಈ ಕಷಾಯವನ್ನು ಸಿಂಪಡಿಸಿದರೆ ಅದು ಸುಧಾರಿಸಿ ಹಸಿರು ಬಣ್ಣದಿಂದ ಕಂಗೊಳಿಸುವುದಲ್ಲದೆ ಬೆಳೆಯ ದಿಂಡು ಗಟ್ಟಿಯಾಗಿ ಎಲೆಗಳು ಮಂದವಾಗಿ ಅಥವಾ ದಪ್ಪವಾಗಿ ಕೀಟಗಳ ಭಾದೆ ಕಂಡು ಬರುವುದಿಲ್ಲ. ಈ ಸಿಂಪಡಣೆಯಿಂದ ಸಾರಜನಕ ಪೂರೈಕೆಯಾಗಿ ಬೆಳೆ ಸುಧಾರಿಸುತ್ತದೆ.

★ ಟೊಮೆಟೊ, ತಿಂಗಳ ಹುರುಳಿ, ಮೂಲಂಗಿ, ಗೋರಿಕಾಯಿ, ಸೊಪ್ಪುಗಳಿಗೆ ಈ ಕಷಾಯ ಸಿಂಪಡಿಸುತ್ತಾ ಬಂದರೆ ಕೀಟಗಳ ಹಾವಳಿ ತಡೆಗಟ್ಟಿ ಬೆಳೆ ಬಹು ಬೇಗ ಕೈ ಸೇರುತ್ತದೆ.

★ ಮೆಣಸಿನ ಬೆಳೆಯಲ್ಲಿ ಹಳದಿ ಎಲೆ ಚುಕ್ಕೆ ರೋಗ ಬಂದು ಬೆಳೆ ಸಂಪೂರ್ಣ ನಾಶವಾಗುತ್ತದೆ. ಇದು ಕಂಡು ಬಂದ ಕೂಡಲೇ 5 ಲೀಟರ್ ಕಷಾಯವನ್ನು ಗುಣಿಗೆ ಪೂರೈಸಿದರೆ ಹಳದಿ ಚುಕ್ಕೆ ಬಂದಿರುವ ಎಲೆಗಳು ಬಿದ್ದು ಆರೋಗ್ಯಕರವಾದ ಚಿಗುರು ಕಂಡು ಬರುತ್ತದೆ. ನೀರಿನ ಪೂರೈಕೆ ಹೆಚ್ಚಾಗಿ ಬೇರುಗಳಿಗೆ ಗಾಳಿ ದೊರೆಯದಿದ್ದಲ್ಲಿ ಪೋಷಕಾಂಶಗಳ ಕೊರತೆ ಉಂಟಾಗಿ ಈ ರೋಗ ಕಂಡು ಬರುತ್ತದೆ.

★ ವೀಳ್ಯದ ಎಲೆ ಬೆಳೆಯನ್ನು ಪ್ರತಿ ದಿನದ 'ಕರೇವು' (ಹಾಲು ಕೊಡುವ ಹಸು) ಎಂದು ಕರೆದಿದ್ದಾರೆ. ಒಂದು ಗುಣಿಯಲ್ಲಿ ಒಂದು ತಿಂಗಳಿಗೆ ಸುಮಾರು ಸಾವಿರ ಎಲೆಗಳ ಇಳುವರಿ ದೊರೆಯುತ್ತದೆ. ಪ್ರತಿ ಗುಣಿಗೆ 5 ಲೀಟರ್ ಕಷಾಯವನ್ನು ಸುರಿಯುವುದರಿಂದ ಇಷ್ಟೇ ಇಳುವರಿಯ ಜೊತೆಗೆ ಉತ್ತಮ ಗುಣಮಟ್ಟದ ಎಲೆಗಳನ್ನು ಕೇವಲ 25 ದಿನಗಳಲ್ಲಿ ಪಡೆಯಲು ಸಾಧ್ಯವಾಗಿದೆ. ಇದೇ ಬೆಳೆಯಲ್ಲಿ ಸೆಪ್ಟೆಂಬರ್ ತಿಂಗಳ ನಂತರ ಡಿಸೆಂಬರ್ ತಿಂಗಳವರೆಗೆ ಕಪ್ಪು ಚುಕ್ಕೆ ರೋಗ ಬರುವುದು ಸಾಮಾನ್ಯ. ಕಪ್ಪು ಚುಕ್ಕೆಗಳಿಂದ ಕೂಡಿದ ಎಲೆಗಳು ಕೆಳಕ್ಕೆ ಬೀಳಲು ಪ್ರಾರಂಭಿಸುತ್ತವೆ. ಕಷಾಯ ಈ ರೋಗವನ್ನು ನಿಯಂತ್ರಿಸುವುದಲ್ಲದೆ, ಇಳುವರಿಯಲ್ಲಿ ಉತ್ತಮ ಗುಣಮಟ್ಟ ಬರಲು ಕಾರಣವಾಗಿದೆ. ಎಲೆ ಚುಕ್ಕೆ ರೋಗಕ್ಕೆ 'ಮಾಲಿಬ್ಡಿನಂ' ಕೊರತೆ ಕಾರಣವಾದರೆ ಎಲೆ ಬೀಳುವುದಕ್ಕೆ 'ಗಂಧಕ' (ಸಲ್ಫರ್) ದ ಕೊರತೆ ಕಾರಣ. ಎಲೆಗಳ ಬೆಳವಣಿಗೆಗೆ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಅಲ್ಲದೆ ಕ್ಯಾಲ್ಸಿಯಂ, ಮೆಗ್ನೀಷಿಯಂ, ಗಂಧಕ, ಕಬ್ಬಿಣ, ಜಿಂಕ್, ತಾಮ್ರ, ಮಾಲಿಬ್ಡಿನಂ, ನಿಕಲ್, ಬೋರಾನ್, ಮ್ಯಾಂಗನೀಸ್



ಮುಂತಾದವು ಕಷಾಯದಿಂದ ದೊರೆಯುತ್ತವೆ.

★ ಸಪೋಟಾ ಬೆಳೆಯಲ್ಲಿ ಕಂದು ಬಣ್ಣದ ಚುಕ್ಕೆಗಳು ಎಲೆಗಳ ಮೇಲೆ ಕಂಡು ಬಂದರೆ ಕಷಾಯವನ್ನು ಸಿಂಪಡಿಸುವುದರ ಜೊತೆಗೆ ಪ್ರತಿ ಗುಣಿಗೆ 2-3 ಲೀಟರ್ ಪೂರೈಸಿದರೆ ಈ ರೋಗದಿಂದ ವಿಮುಕ್ತಿ ದೊರೆಯುತ್ತದೆ.

★ ನಿಂಬೆ ಗಿಡಗಳಲ್ಲಿ ಹಳದಿ ಚುಕ್ಕೆಗಳು ಕಂಡು ಬಂದು ಇಳುವರಿ ಕಡಿಮೆಯಾಗುವುದಲ್ಲದೆ, ನಿಂಬೆ ಕಾಯಿಗಳಲ್ಲಿ ರಸ ಇಲ್ಲದೆ ಬರೇ ಗೊಡ್ಡು ನಿಂಬೆ ಕಾಯಿಗಳು ದೊರೆಯುತ್ತವೆ. ಸಾರಜನಕ ಕೊರತೆಯಿಂದ ಕೀಟಗಳ ಬಾಧೆ ಕಂಡು ಬರುತ್ತದೆ. ಗಿಡಗಳಿಗೆ ನೀರಿನ ಪೂರೈಕೆಯಲ್ಲಿ ಸಂಪೂರ್ಣ ಕೊರತೆ ಉಂಟಾದಾಗ ಪೋಷಕಾಂಶಗಳು ಸಮರ್ಪಕವಾಗಿ ದೊರೆಯದೆ ರಸ ಇಲ್ಲದ ಗೊಡ್ಡು ಕಾಯಿಗಳು ಕಂಡು ಬರುತ್ತವೆ. ಕಷಾಯ ಸಿಂಪಡಣೆಯಿಂದ ಕೀಟಗಳ ಬಾಧೆ ನಿವಾರಣೆಯಾಗುತ್ತದೆ. ಗಿಡಗಳಿಗೆ ನೀರು ಹಾಯಿಸಿ ಪ್ರತಿ ಗಿಡಕ್ಕೆ 5 ಲೀಟರ್ ಕಷಾಯವನ್ನು ಪೂರೈಸಿದರೆ ಕಾಯಿಗಳ ಗೊಡ್ಡುತನ ಹೊಸಕಾಯಿಗಳಲ್ಲಿ ಕಂಡುಬರದೆ ಉತ್ತಮ ಕಾಯಿಗಳು ದೊರೆಯುತ್ತವೆ.

★ ಕಾಫಿ ಬೆಳೆಯಲ್ಲಿ ಸೊರಗು ರೋಗ ಕಂಡು ಬಂದಾಗ ಕಷಾಯದ ಸಿಂಪಡಣೆಯಿಂದ ರೋಗದ ನಿವಾರಣೆ ಸಾಧ್ಯವಾಗಿದೆ.

★ ಅಡಿಕೆ ಬೆಳೆಯಲ್ಲಿ ಕಿರು ಗಾತ್ರದ ಎಲೆಗಳು ಕಂಡು ಬಂದು ಕ್ರಮೇಣ ಬೆಳವಣಿಗೆ ಕುಂಠಿತವಾಗಿ ಗಿಡವೇ ಸಂಪೂರ್ಣ ನಾಶವಾಗುತ್ತವೆ. ರೈತರಿಗೆ ಕಿರು ಎಲೆ ಬಂದ ಮೇಲೆ ಗಿಡ ತೆಗೆದು ಹೊಸ ಗಿಡ ನೆಡುವುದು ಪದ್ಧತಿಯಾಗಿದೆ. 5 ಲೀಟರ್ ಕಷಾಯವನ್ನು ಗಿಡಕ್ಕೆ ಪೂರೈಸಿದರೆ ಮುಂದೆ ಬರುವ ಎಲೆಗಳು ದೊಡ್ಡದಾಗಿ ಬಂದು ಗಿಡದ ಬೆಳವಣಿಗೆ ಆರೋಗ್ಯಕರವಾಗಿರುತ್ತದೆ. ಬೋರಾನ್ ಕೊರತೆಯಿಂದ ಈ ರೋಗ ಬರುತ್ತದೆ.

★ ಅಕ್ಟೋಬರ್ ತಿಂಗಳಲ್ಲಿ ಅಡಿಕೆ ಸುಳಿ ರೋಗ ಬರುತ್ತದೆ. ಮೊದಲು ಸುಳಿಗರಿ ಹಳದಿ ಬಣ್ಣಕ್ಕೆ ತಿರುಗಿ ನಂತರ ಸುಳಿ ಕೊಳೆತು ಬೀಳುತ್ತದೆ. ಸುಳಿಗರಿ ಹಳದಿ ಬಣ್ಣಕ್ಕೆ ಬಂದಾಗಲೇ ಕಷಾಯವನ್ನು ಸುಳಿಗೆ ಸುರಿದರೆ ಹೊಸದಾದ ಆರೋಗ್ಯಕರವಾದ ಸುಳಿ ಬರುತ್ತದೆ. ಬಿಳಿ ಬಣ್ಣದ ಸಣ್ಣ ಕೀಟಗಳಿಂದ (ಕಿಲುಮೆ ಹುಳುಗಳ ರೀತಿ) ಈ ಕೊಳೆ ರೋಗ ಬರುತ್ತದೆ. ಕಷಾಯ ಸುರಿದರೆ ಈ ಕೀಟಗಳು ಹೊರಬಂದು ಕೆಳಕ್ಕೆ ಬಿದ್ದಿರುತ್ತವೆ.

ಈ ರೀತಿ ಕಷಾಯದಿಂದ ಅನೇಕ ಸುಧಾರಣೆಗಳು ಕಂಡು ಬಂದು ಅನೇಕ ರೈತರು ಈ ಕಷಾಯದ ಬಳಕೆ ಮಾಡುತ್ತಿದ್ದಾರೆ. ಕಷಾಯದ ಬಳಕೆಯಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿ ಬೆಳೆಗಳಲ್ಲಿ ಇಳುವರಿ ಹೆಚ್ಚುವುದಲ್ಲದೆ ಗುಣ ಮಟ್ಟದ ಬೆಳೆಗಳು ಕೈ ಸೇರಿ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಪಡೆಯುತ್ತವೆ. ಪರಿಸರ ಮಾಲಿನ್ಯ, ಜಲ ಮಾಲಿನ್ಯಕ್ಕೆ ಅವಕಾಶವಿರದು ಅಲ್ಲದೆ ಮಾನವನಲ್ಲಿ ವಿಷ ಸೇರುವುದು ತಪ್ಪಿ ಉತ್ತಮ ಆರೋಗ್ಯ ದೊರೆಯುತ್ತದೆ ಎಂಬುದು ಸಂತೇಶಿವರರ ಖಚಿತ ಅಭಿಪ್ರಾಯ.

ಅಪಾಯದ ಅಂಚಿನಲ್ಲಿ ಮಲೆನಾಡ ಗಿಡ್ಡ

ಕೃಷಿಯಲ್ಲಿ ಆಧುನೀಕರಣ, ವಾಣಿಜ್ಯೀಕರಣ ಹೆಚ್ಚಿದಂತೆ ಕೃಷಿಯ ಅವಿಭಾಜ್ಯ ಅಂಗವಾಗಿದ್ದ ದೇಶೀಯ ದನ, ಕುರಿ, ಆಡು, ಹಸು, ಎಮ್ಮೆಗಳ ನಾಟಿ ತಳಿಗಳು ಕ್ರಮೇಣ ಮಾಯವಾಗುತ್ತಿವೆ. ಇದರೊಟ್ಟಿಗೆ 70ರ ದಶಕದಲ್ಲಿ ಆರಂಭವಾದ ಕ್ಷೀರ ಕ್ರಾಂತಿಯ ಫಲಶ್ರುತಿಯಾಗಿ ದೇಶದ 25ಕ್ಕೂ ಹೆಚ್ಚು ಅತ್ಯಂತ ಸದೃಢ ದನಕರು ತಳಿಗಳು ಇಂದು ನಾಮಾವಶೇಷದ ಹಂತದಲ್ಲಿವೆ. ಅಪಾಯದ ಅಂಚಿನಲ್ಲಿರುವ ಅಂತಹ ತಳಿಗಳಲ್ಲಿ ಮಲೆನಾಡಿನ ಜನರ ಪಾಲಿಗೆ ನಿಜವಾದ ಪುಣ್ಯಕೋಟಿಯೇ ಆಗಿದ್ದ ಮಲೆನಾಡು ಗಿಡ್ಡ ತಳಿಯೂ ಒಂದು. ಪಶ್ಚಿಮ ಘಟ್ಟ ವ್ಯಾಪ್ತಿಯ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಮತ್ತು ಹಾಸನ ಜಿಲ್ಲೆಗಳ ಕೆಲವೆಡೆ ಸಾಮಾನ್ಯವಾಗಿದ್ದ ಮಲೆನಾಡ ಗಿಡ್ಡ ತಳಿಯ ದನ ಕರುಗಳು ಕುಬ್ಜ ಹಾಗೂ ತುಂಡು ದೇಹದವು. ಯಾವುದೇ ವಿಶೇಷ ಆಹಾರದ ಅಗತ್ಯವಿಲ್ಲದೆ ಮಲೆನಾಡಿನ ಬೆಟ್ಟ ಗುಡ್ಡಗಳಲ್ಲಿ ಮೇಯುತ್ತಾ ಸ್ವಾಭಾವಿಕವಾಗಿ ಉತ್ಕೃಷ್ಟ ಮತ್ತು ಹೆಚ್ಚಿನ ರೋಗ ನಿರೋಧಕ ಶಕ್ತಿಯ ಹಾಲು ನೀಡಬಲ್ಲವು. ದಿನವೊಂದಕ್ಕೆ 3 ರಿಂದ 5 ಲೀಟರ್ ಹಾಲು ನೀಡುವ ಈ ತಳಿ ಮಲೆನಾಡಿನ ಅತಿ ಮಳೆ, ಚಳಿಗೆ ಹೊಂದಿಕೊಂಡು ಹೋಗಬಲ್ಲದು. ಕಾಲುಬಾಯಿ ರೋಗ ಸೇರಿದಂತೆ ಹಲವು ರೋಗಗಳಿಗೆ ಹೆಚ್ಚಿನ ನಿರೋಧಕ ಶಕ್ತಿ ಹೊಂದಿದೆ. ಹಾಗೇ ಅತ್ಯಂತ ಚುರುಕಿನ ಇವು ಜನರೊಂದಿಗೆ ಆಪ್ಯಾಯಮಾನವಾಗಿ ಹೊಂದಿಕೊಳ್ಳಬಲ್ಲವು. ಇಂಥಾ ಪುಣ್ಯ ಕೋಟಿ ತಳಿಯೊಂದು ನಮ್ಮ ಪಶು ಪಾಲನೆ ಅಭಿವೃದ್ಧಿ ರಥದ ಕಾಲ್ತುಳಿತಕ್ಕೆ ಸಿಕ್ಕು ಇನ್ನಿಲ್ಲದಂತಾಗುತ್ತಿದೆ.

ಮಲೆನಾಡ ಗಿಡ್ಡ ತಳಿಯನ್ನು ಅಧ್ಯಯನ ಮಾಡಿ ಅದರ ಮೂಲ ಸ್ವರೂಪದಲ್ಲೇ ಧಾರಣ ಶಕ್ತಿಯನ್ನು ಹೆಚ್ಚಿಸಿ, ತಳಿ ಸಂರಕ್ಷಣೆಗೆ ಪ್ರಯತ್ನಿಸಬೇಕಾಗಿದ್ದ ಪಶುಪಾಲನಾ ಇಲಾಖೆ ಅದನ್ನೆಲ್ಲಾ ಮರೆತು ವಿದೇಶಿ ತಳಿಗಳನ್ನು ಬಳಸಿ ಈ ಸ್ಥಳೀಯ ತಳಿಯನ್ನು ಸಂಕರ (ಕ್ರಾಸ್ ಬ್ರೀಡ್) ಗೊಳಿಸಿತು. ಇಲ್ಲಿಂದಲೇ ಮಲೆನಾಡು ಗಿಡ್ಡ ತಳಿಯ ಅವಸಾನ ಶುರುವಾಯಿತು. ಆವರೆಗೆ ಜಾನುವಾರು ಸಾಕಣೆಯನ್ನು ಒಂದು ಸಾಂಸ್ಕೃತಿಕ ಮತ್ತು ಧಾರ್ಮಿಕ ಕರ್ತವ್ಯ ಎಂದು ಎಣಿಸಿದ್ದ ರೈತರಿಗೆ ಹೈನುಗಾರಿಕೆ ಉದ್ಯಮದ ಲಾಭದ ಮತ್ತೇರಿಸಿ ಆಮದು ತಳಿಗಳನ್ನು ಚಾಲನೆಗೆ ಬಿಟ್ಟಿತು.

ಮೂಲ: ವಿಜಯ ಕರ್ನಾಟಕ, ಸೆ. 6 & 7, 2002

ಭಾಗೀರಥಮ್ಮನ ಮೈಸೂರು ಬದನೆ

ಕಾಡು ಬದನೆ ಅಥವಾ ಮೈಸೂರು ಬದನೆ ಎಂದು ಕರೆಯಲ್ಪಡುವ ಇದು ಮಲೆನಾಡಲ್ಲಿ ಎಲ್ಲೆಂದರಲ್ಲಿ ಕಂಡು ಬರುತ್ತದೆ. ಚಿಕ್ಕ ಗೋಲಿಯಂತಹ ಗುಜ್ಜಾಗಿ ಕಾಯಿ ಬಿಡುವ ಇದಕ್ಕೆ ಮೈ ತುಂಬಾ ಮುಳ್ಳು. ಹುಟ್ಟಿ ಎರಡು ಮೂರು ತಿಂಗಳಿಗೆ ದೊಡ್ಡ ಪೊದೆಯಾಗುತ್ತದೆ. ಕೀಳಲು ಬೇರು ಗಟ್ಟಿ, ಎಷ್ಟು ಬಾರಿ ಕಡಿದರೂ ಬೇರು ಕಾಂಡ ಚಿಗುರುತ್ತಲೇ ಇರುತ್ತವೆ. ಇದು ಕಸಿಗೆ ಅತ್ಯುತ್ತಮ. ಕಸಿ ಮಾಡುವುದನ್ನೇ ಹವ್ಯಾಸವಾಗಿಸಿಕೊಂಡ ಬೇಳೂರಿನ ಭಾಗೀರಥಮ್ಮನವರು ಕೆಲವು ಒಳ್ಳೆ ಜಾತಿಯ ಬದನೆ ಕಡ್ಡಿಗಳನ್ನು ತಂದು ಮೈಸೂರು ಬದನೆಯನ್ನು ಮೂಲ ಸಸಿಯಾಗಿ ಬಳಸಿ ಕಸಿ ಮಾಡಿ ಬದನೆ ಮರಗಳನ್ನೇ ಬೆಳೆಸಿದ್ದಾರೆ!. ಮೈಸೂರು ಬದನೆಗೆ ಕಸಿ ಮಾಡಿದರೆ ಬೇಸಿಗೆಯಲ್ಲಿ ಕಡಿಮೆ ನೀರು ಸಾಕು. ಯಾವ ರೋಗದಿಂದಲೂ ಗಿಡ ಸಾಯುವುದಿಲ್ಲ. ಕಾಂಡ ಬಲಿತು ಬದನೆ ಮರವಾಗುತ್ತದೆ. ಆಯುಷ್ಯ ಹೆಚ್ಚು, ವರ್ಷಾವಧಿ ಕಾಯಿಗಳು ಸಿಗುತ್ತವೆ. ಯಥೇಚ್ಛ ಆಹಾರ ಸಿಗುವುದರಿಂದ ಮೂಲ ಗಾತ್ರಕ್ಕಿಂತ ದೊಡ್ಡ ಗಾತ್ರದ ಕಾಯಿಗಳು ದೊರೆಯುತ್ತವೆ. ವಾರದಲ್ಲಿ ಕನಿಷ್ಟ ನಾಲ್ಕು ಕಾಯಿಗಳು ಸಿಗುತ್ತವೆ. ಹಾಗೆ ಅನುಕೂಲತೆಗಳ ಪಟ್ಟಿಯನ್ನೇ ಭಾಗೀರಥಮ್ಮನವರು ಮುಂದಿಡುತ್ತಾರೆ.

ಮೂಲ: ಪ್ರಜಾವಾಣಿ: ಕೃಷಿರಂಗ, ಅ. 9, 2002

ಮರದರಿಶಿನ

ಪಶ್ಚಿಮ ಘಟ್ಟಗಳಲ್ಲಿ ಹೆಚ್ಚು ಮಳೆ ಬೀಳುವ ದಟ್ಟನೆರಳಿನ ಜೌಗು ಪ್ರದೇಶಗಳಲ್ಲಿ ಮಾತ್ರವೇ ಕಂಡು ಬರುವ 'ಅಮೃತ ಬಳ್ಳಿ' ಕುಟುಂಬಕ್ಕೆ ಸೇರಿದ, ಎತ್ತರಕ್ಕೆ ಬೆಳೆದು ಮರಗಳ ನೆತ್ತಿಯನ್ನು ಆವರಿಸಿಕೊಳ್ಳುವ ಬೃಹದಾಕಾರದ ಒಂದು ಮರ ಬಳ್ಳಿ ಇದು. ಊರುಗೋಲಿಗಿಂತ ದಪ್ಪದಾದ ಮಣ್ಣಿನ ಬಣ್ಣದ ಕಾಂಡ. ಬಲಿತ ಕಾಂಡವನ್ನು ಗೀರಿದರೆ ಅಚ್ಚ ಹಳದಿ ಬಣ್ಣದ ದ್ರವ ಒಸರುತ್ತದೆ. ಈ ಕಾರಣದಿಂದಲೇ ಇದು ಮರದರಿಶಿನ (*Crosinium fenestratum*). ವೀಳೆಯದೆಲೆಯನ್ನು ಹೋಲುವ ಅಷ್ಟೇ ಅಗಲದ ಹೊಳಪಿನ ದಟ್ಟ ಹಸಿರು ಎಲೆಗಳಿರುತ್ತವೆ. ಎಲೆಯ ಹಿಂದೆ ಬೆಳ್ಳಿ ಬಣ್ಣದ ನುಣುಪಾದ ತುಪ್ಪಳ ಇರುತ್ತದೆ. ಕರುಳಿನ ಕ್ಯಾನ್ಸರ್ ಮತ್ತು ದೃಷ್ಟಿದೋಷ ನಿವಾರಣೆಗೆಂದು ಇರುವ ಔಷಧಗಳ ತಯಾರಿಕೆಗೆ ಇದನ್ನು ಬಳಸುತ್ತಾರೆ. ಆಯುರ್ವೇದದ ಔಷಧ ತಯಾರಿಕೆಯಲ್ಲಿ ಇದರ ಬಳಕೆ ಹೆಚ್ಚು. ಸ್ಥಳೀಯವಾಗಿ ದೃಷ್ಟಿದೋಷ ಮತ್ತು ಕಣ್ಣಿನ ಆರೈಕೆಯಲ್ಲಿ ಬಳಕೆಯಾಗುತ್ತದೆ. ಕರ್ನಾಟಕದ ಕೊಡಗು, ಕೇರಳದ ವೈನಾಡು, ಸೈಲೆಂಟ್ ವ್ಯಾಲಿ, ಇಡಕ್ಕಿಯ ಅರಣ್ಯ ಪ್ರದೇಶದಲ್ಲಿ ಮಾತ್ರ ವಿರಳವಾಗಿ ಇದು ಕಂಡು ಬರುತ್ತದೆ.

ಮೂಲ: ಪ್ರಜಾವಾಣಿ, ಕರ್ನಾಟಕ ದರ್ಶನ, ಡಿ. 19, 2002

ದೇವರಾಯರ ಹೊಲದ ತುಂಬ ದೇಶೀ ಭತ್ತ

ಭತ್ತದ ಅಪರೂಪದ 22 ಹಳೆ ತಳಿಗಳನ್ನು ಇನ್ನೂ ಸಂರಕ್ಷಿಸುತ್ತಿರುವ ರೈತರೊಬ್ಬರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿದ್ದಾರೆ. 50 ವಿವಿಧ ಭತ್ತದ ತಳಿಗಳನ್ನು ಕಾಪಾಡಿದ್ದರೂ ಕಾರಣಾಂತರದಿಂದ ಅದು 22ಕ್ಕೆ ತಲುಪಿದೆ. ಪ್ರತಿ ವರ್ಷ ಈ ಎಲ್ಲ ತಳಿಗಳನ್ನು ಬೆಳೆಸುತ್ತಾರೆ. ಒಂದೇ ಹೊಲದಲ್ಲಿ 8 ವಿಧದ ತಳಿಗಳೂ ಇವೆ. ಆ ರೈತರ ಹೆಸರು ಬಂಗಾರಿ ಕಿಲ್ಲೂರು ದೇವರಾಯ. ಸಿಹಿ ಅನ್ನ, ಅವಲಕ್ಕಿ, ಅರಳು, ಪಾಯಸ, ಕೇಸರೀಭಾತ್‌ಗೆ ಹೇಳಿ ಮಾಡಿಸಿದ ತಳಿಗಳು ಒಂದೆಡೆಯಾದರೆ, ಅರೆದು ಹುಡಿ ಮಾಡಿ ಕಲಸಿ ಕಾಯಿಸಿದರೆ ವಾಂತಿ ಭೇದಿಗೆ ಔಷಧಿ ಆಗಬಲ್ಲ 'ಅತಿಕರ' ತಳಿ ಇನ್ನೊಂದೆಡೆ. ಈವರೆಗೆ ರಾಸಾಯನಿಕ ಗೊಬ್ಬರವನ್ನಾಗಲಿ ಕೀಟನಾಶಕವನ್ನಾಗಲಿ ಒಂದು ಹಿಡಿ ಕೂಡ ಬಳಸಿಲ್ಲ. ಗದ್ದೆಗೆ ಬರೀ ಹಸಿರೆಲೆ ಗೊಬ್ಬರ. ಒಂದು ಎಕರೆಗೆ 15 ಕ್ವಿಂಟಾಲ್ ಭತ್ತ ಬೆಳೆಯುತ್ತಾರೆ. ಈವರೆಗೂ 'ನನ್ನ ಪೈರಿಗೆ ಕೀಟ, ರೋಗ ಬಾಧೆ ಬಂದಿಲ್ಲ, ನೀವೇ ನೋಡಿ' ಎನ್ನುತ್ತಾರೆ ದೇವರಾಯರು ಹೆಮ್ಮೆಯಿಂದ.

ಮೂಲ: ಪ್ರಜಾವಾಣಿ, ನ. 20, 2002

ಅಹಮದಾಬಾದಿನಲ್ಲಿ 2002ರ 'ಸೃಷ್ಟಿ' ಸನ್ಮಾನ ವಿಜೇತರು

ಮುದ್ದೆ ಅಲ್ಲ, ಇದು ಸೆಲ್ವಿಯ ಮದ್ದು

ತಮಿಳುನಾಡಿನ ಇಪ್ಪತ್ಮೂರು ವರ್ಷ ವಯಸ್ಸಿನ ಕುಮಾರಿ ಜಿ.ಎಸ್. ಸೆಲ್ವಿಯವರು ಇದುವರೆಗೆ ಸುಮಾರು 2000 ಪ್ರಾಣಿಗಳಿಗೆ ಹಸಿರು ಔಷಧಿ ಮತ್ತು ಹಸಿರು ಗಿಡ ಮೂಲಿಕೆಗಳಿಂದ ಉಪಚರಿಸಿದ್ದಾರೆ. ಶಾಲಾ ವಿದ್ಯಾಭ್ಯಾಸ ಮುಗಿಸಿ ನರ್ಸಿಂಗ್ ತರಬೇತಿ ಪಡೆದಿರುವ ಇವರು ಹಲವು ಔಷಧಿ ಸಸ್ಯಗಳನ್ನು ಗುರುತಿಸಬಲ್ಲವರಾಗಿದ್ದು ಹಲವು ನಾಟಿ ವೈದ್ಯ ಪದ್ಧತಿಗಳನ್ನು ಮೈಗೂಡಿಸಿಕೊಂಡಿದ್ದಾರೆ. ಇವರು ಕೊಡುವ ಹಸಿರು ಔಷಧಿಗಳು ಬಂಜೆತನ, ಹಾವು ಕಚ್ಚುವಿಕೆ, ಕೋಳಿ ರೋಗಗಳು, ಜೀರ್ಣಕ್ಕೆ ಸಂಬಂಧಿಸಿದ ತೊಂದರೆಗಳು, ಗರ್ಭಧಾರಣಾ ತೊಂದರೆಗಳು ಮತ್ತಿತರ ಆಂತರಿಕ ಹಾಗೂ ಹೊರಗಿನ ಕ್ಲೀಷೆಗಳಿಗೆ ಅತ್ಯಂತ ಪರಿಣಾಮಕಾರಿ. ಈ ದಿನಗಳಲ್ಲಿ ವಿವಿಧ ಸ್ಥಳೀಯ ಗಿಡ ಮೂಲಿಕೆಗಳನ್ನು ಬಳಸಿ ಮುದ್ದೆ (ಕಿತ್ತಳೆ ಹಣ್ಣಿನ) ಗಾತ್ರದ ಉಂಡೆಗಳನ್ನು ತಯಾರಿಸುವುದರಲ್ಲಿ ನಿರತರಾಗಿದ್ದಾರೆ. ಕಳೆದ ಒಂದು ವರ್ಷದಲ್ಲೇ ಸುಮಾರು 500 ಉಂಡೆಗಳನ್ನು ತಯಾರಿಸಿರುವ ಇವರು ಈ ಉಂಡೆ ಎಲ್ಲಾ ವಿಧದ ಜೀರ್ಣ ಸಂಬಂಧಿ ರೋಗಗಳಿಗೆ ಸಿದ್ಧೌಷಧ ಎನ್ನುತ್ತಾರೆ.

ಪಂಪು ಬಾವಿಗೆ ಬಿದ್ದಿದೆಯೇ – ನಾರಾಯಣ ಬಾಯಿ ನೋಡಿ

ಗುಜರಾತಿನ ಅಮ್ರೇಲಿ ಜಿಲ್ಲೆ 'ಧಾರಿ' ತಾಲ್ಲೂಕಿನ ಯಾವುದೇ ಸ್ಥಳದಲ್ಲಿ ನೀರೆತ್ತುವ ಪಂಪ್‌ಸೆಟ್ ಬಾವಿಗೆ ಬಿದ್ದಿದ್ದರೆ ಅಲ್ಲಿನ ಜನ 'ಕಾಗದಾದಿ' ಎಂಬ ಹಳ್ಳಿಗೆ ದೌಡಾಯಿಸುತ್ತಾರೆ. ಕಾರಣ ಅಲ್ಲಿದ್ದಾರೆ ಆಪದ್ಬಾಂಧವ ಹತ್ತಿ ಮತ್ತು ನೆಲಗಡಲೆ ಬೆಳೆಗಾರರಾದ ನಾರಾಯಣ ಬಾಯಿ ಮಾಲ್ವಿಯ. ನಾರಾಯಣ ಬಾಯಿಯವರು ತಮ್ಮ ಸ್ವಂತ ಬುದ್ಧಿಮತ್ತೆಯ ಸಹಾಯದಿಂದ ಸುಲಭವಾಗಿ ಸ್ಥಳಾಂತರಿಸಬಲ್ಲ ಗಾಲಿ ಯಂತ್ರವನ್ನು ತಯಾರಿಸಿದ್ದಾರೆ. ಉದ್ದನೆಯ ಪೈಪುಗಳನ್ನು ಜೋಡಿಸಲು ಅವಕಾಶವಿರುವ ಈ ಯಂತ್ರ ಸುಮಾರು 700 ಅಡಿ (230 ಮೀ) ಆಳದಿಂದ ಪಂಪ್ ಸೆಟ್ಟನ್ನು ಕೇವಲ ಮೂರು ಗಂಟೆಗಳ ಅವಧಿಯಲ್ಲಿ ಮೇಲೆತ್ತಬಲ್ಲದು. ಈ ಯಂತ್ರ ಇಲ್ಲದ ಪಕ್ಷದಲ್ಲಿ ಇದೇ ಕೆಲಸಕ್ಕೆ ಇನ್ನು ಹೆಚ್ಚಿನ ವೇಳೆ ಮತ್ತು ಆಳುಗಳು ಬೇಕಾಗುತ್ತಿತ್ತು. ನಾರಾಯಣ ಬಾಯಿಯವರ ಸಾಧನೆಗಳಿಗೆ ಬೆನ್ನೆಲುಬಾಗಿ ಇವರೊಟ್ಟಿಗೆ ಕೈ ಜೋಡಿಸಿರುವ ಇವರ ಪತ್ನಿ ಹಮಿ ಬೇನ್ ಒಂದು ಪ್ರಾಯೋಗಿಕ, ಸುಸ್ಥಿರ, ಕಡಿಮೆ ವೆಚ್ಚದ ತಂತ್ರಜ್ಞಾನ ಅಭಿವೃದ್ಧಿಪಡಿಸಲು ನೆರವಾಗಿದ್ದಾರೆ.

ರುಚಿಕರ ಅವರೆ ತಳಿಯ ಸೃಷ್ಟಿಕರ್ತ ಜೀತಾಬಾಯಿ ಪಟೇಲರು

ಜೀತಾಬಾಯಿ ಪಟೇಲರು ಗುಜರಾತಿನ ಸಬರಕಾಂತ ಜಿಲ್ಲೆ ವದಾಲಿ ತಾಲ್ಲೂಕಿನ ವೆಟ್ಲ ಗ್ರಾಮದ ಒಬ್ಬ ದೊಡ್ಡ ಜಮೀನುದಾರರು. 1987ರಲ್ಲಿ ಅಲ್ಲಿ ಭೀಕರ ಬರಗಾಲ ಬಂದಿತ್ತು. ಗೋಮಾಳಗಳೆಲ್ಲ ಒಣಗಲಾಗಿ ಸಂಗ್ರಹಿಸಿಟ್ಟಿದ್ದ ಹುಲ್ಲು ಸೊಪ್ಪುಗಳು ಖಾಲಿಯಾಗಿದ್ದವು. ಸಾಕು ಪ್ರಾಣಿಗಳ ಮೇವನ್ನು ಸುಮಾರು 40 ಕಿ.ಮೀ. ದೂರದ ಊರುಗಳಿಂದ ತರಬೇಕಿತ್ತು. ಹೀಗೆ ತರಬೇಕಾದರೆ ಮೇವಿನ ಲೋಡಿನಲ್ಲಿ ಒಂದು ಆರೋಗ್ಯಕರವಾಗಿದ್ದ ಅವರೆ (*Dolichos lablab*) ಹೊಂಬನ್ನು ಜೀತಾ ಬಾಯಿ ಗಮನಿಸಿದರು. ಕೂಲಂಕುಷವಾಗಿ ಗಮನಿಸಲಾಗಿ ಕೆಲವು ಹೊಂಬುಗಳಲ್ಲಿ ಬಲಿತ ಅವರೆಕಾಯಿಗಳ ಗೊಂಚಲುಗಳು ಇರುವುದು ಕಂಡು ಬಂತು. ಮತ್ತೆ ಕೆಲವು ಹೊಂಬುಗಳಲ್ಲಿ ಹಸಿ ಹಸಿ ಕಾಯಿಗಳಿದ್ದವು. ಈ ಹಸಿ ಕಾಯಿಗಳನ್ನು ತರಕಾರಿಯಾಗಿ ಪಟೇಲ್ ಕುಟುಂಬಗಳಲ್ಲಿ ಬಳಸುತ್ತಾರೆ. ಈ ಹಸಿ ಅವರೆ ಕಾಯಿಗಳ ಗಾತ್ರ, ಸುವಾಸನೆ, ರುಚಿ ಮತ್ತು ಅದರ ಬಾಹ್ಯ ಚಹರೆ ಇವರನ್ನು ಆಕರ್ಷಿಸಿತು. ಅವರು ತಕ್ಷಣಕ್ಕೆ ಮಾಡಿದ ಕೆಲಸವೆಂದರೆ ಬಲಿತ ಕಾಯಿಗಳನ್ನು ಸಂಗ್ರಹಿಸಿ, ಒಣಗಿಸಿ ಬೀಜಗಳನ್ನು ಜಾಗರೂಕತೆಯಿಂದ ಸಂರಕ್ಷಿಸಿದರು. ನಂತರ ಸತತ ನಾಲ್ಕು ವರ್ಷಗಳ ಕಾಲ ನಿರಂತರ ಅವಲೋಕಿಸಿ ಮತ್ತು ಉತ್ತಮವಾಗಿ ಕಂಡು ಬಂದ ಗಿಡಗಳನ್ನು ಆಯ್ಕೆ ಮಾಡುವುದರ ಮೂಲಕ ಬೇಗ ಹೂ ಬಿಡುವ, ಉತ್ತಮ ರೋಗ ನಿರೋಧಕ ಶಕ್ತಿಯುಳ್ಳ ಮತ್ತು ಉತ್ತಮ ಇಳುವರಿ ಕೊಡಬಲ್ಲ ಒಂದು ಹೊಸ ತಳಿಯ ರೂವಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಶ್ರೇಯಸ್ಸಿನ ಸಾಧನೆಗಾಗಿ 1998 ಸಾಲಿನ ಗುಜರಾತ್ ಸರ್ಕಾರದ 'ಸರ್ದಾರ್ ಕೃಷಿ' ಪ್ರಶಸ್ತಿಗೆ ಪಾತ್ರರಾದರು.

ಪಂಚಗವ್ಯದ ಗಮ್ಮತ್ತಿನ ಡಾ. ನಟರಾಜನ್

ಐವತ್ತೆರಡು ವರ್ಷ ವಯಸ್ಸಿನ ಅಲೋಪತಿ ವೈದ್ಯ ಡಾ. ನಟರಾಜನ್ ತಮಿಳು ನಾಡಿನ ಈರೋಡ್ ಜಿಲ್ಲೆ ಕೋಡುಮುಡಿ ಗ್ರಾಮದಲ್ಲಿ ವಾಸವಿದ್ದಾರೆ. ಇವರು ಹಸು ಮೂಲದ ಸಗಣಿ, ಗಂಜಲ, ಹಾಲು, ಮೊಸರು ಮತ್ತು ತುಪ್ಪಗಳನ್ನು ಬೆರೆಸಿ ಪಂಚಗವ್ಯವೆಂಬ ವಿಶಿಷ್ಟ ಮದ್ದನ್ನು ತಯಾರಿಸಿ ಪ್ರಸಿದ್ಧರಾಗಿದ್ದಾರೆ. ಇದಕ್ಕೆ ಕಬ್ಬಿನ ಹಾಲು, ಎಳನೀರು, ಬಾಳೆ ಹಣ್ಣು ಮತ್ತು ನೀರಾ (ಹೆಂಡ) ಗಳನ್ನು ಹಾಕುತ್ತಾರೆ. ಈ ಪಂಚಗವ್ಯ ಹಲವು ಸಸ್ಯ, ಪ್ರಾಣಿ ಮತ್ತು ಮಾನವ ರೋಗಗಳಿಗೆ ಪರ್ಯಾಯ ಔಷಧಿಯಾಗಿದೆ. ಅಗಲ ಬಾಯಿಯುಳ್ಳ ಒಂದು ಮಣ್ಣಿನ ಮಡಿಕೆ, ಕಾಂಕ್ರೀಟ್ ತೊಟ್ಟಿ ಅಥವಾ ಪ್ಲಾಸ್ಟಿಕ್ (ಕ್ಯಾನುಗಳ) ಡಬ್ಬಗಳಲ್ಲಿ ಈ ಮೇಲೆ ತಿಳಿಸಿದ ಸಾಮಗ್ರಿಗಳನ್ನು ತುಂಬಿ ನೆರಳಿನಲ್ಲಿಟ್ಟು ದಿನಕ್ಕೆ ಎರಡು ಬಾರಿ ಆ ಮಿಶ್ರಣವನ್ನು ಕಲಕುತ್ತಿದ್ದರೆ ಏಳು ದಿನಗಳಲ್ಲಿ ಪಂಚಗವ್ಯ ತಯಾರಾಗುತ್ತದೆ. ಈ ಪಂಚಗವ್ಯವನ್ನು ಈರೋಡ್, ಕೊಯಮತ್ತೂರು, ಸೇಲಂ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಸಾವಿರಕ್ಕೂ ಹೆಚ್ಚು ರೈತರು ಬಳಸಿ ಯಶಸ್ವಿಯಾಗಿದ್ದಾರೆ.

ಅಳಲೇ ಕಾಯಿ

ಹೀಗೊಂದು ಹಬ್ಬ

ಗುಜರಾತಿನ ತಿತೋಯಿ ಗ್ರಾಮಸ್ಥರು 'ನಡರ್ವ' ಎಂಬ ವಿಶಿಷ್ಟ ಹಬ್ಬವೊಂದನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ 'ನಡರಿಯಾದೇವ' ಎಂಬ ಜೀವ ವೈವಿಧ್ಯ ಮತ್ತು ಆರೋಗ್ಯಕ್ಕೆ ಸಂಬಂಧ ಪಟ್ಟ ದೇವರನ್ನು ಪೂಜಿಸುತ್ತಾರೆ. ಮಳೆಗಾಲದಲ್ಲಿ ಹುಲ್ಲುಗಳು ಸುಮಾರು ಅರ್ಧ ಅಡಿ ಬೆಳೆದ ವೇಳೆಗೆ ಹಳ್ಳಿಗರು ಹತ್ತಿರದ ಕಾಡುಗಳಿಗೆ ಹೋಗಿ ನೂರ ಇಪ್ಪತ್ತೈದು ವಿವಿಧ ಜಾತಿಯ ಗಿಡ ಮೂಲಿಕೆಗಳನ್ನು ಕಿತ್ತು ತರುತ್ತಾರೆ. ಆಗಸ್ಟ್ ತಿಂಗಳ ಮೂರು ಪವಿತ್ರ ದಿನಗಳಲ್ಲಿ (ಗುಜರಾತಿ ಪಂಚಾಂಗದ ಪ್ರಕಾರ) ಈ ಹಬ್ಬ ಆಚರಿಸಲ್ಪಡುತ್ತದೆ. ಮೊದಲ ದಿನ ಗಿಡ ಮೂಲಿಕೆಗಳನ್ನು ಕಿತ್ತು ತಂದು ತೇಗದ ಎಲೆಗಳನ್ನು ಹಾಸಿ (ಹರಡಿ) ಗುಡ್ಡೆ ಹಾಕುತ್ತಾರೆ. ನಂತರ ಈ ಗಿಡ ಮೂಲಿಕೆಗಳನ್ನು ಚೆನ್ನಾಗಿ ಅರೆದು (ಪೇಸ್ಟಿನ ರೂಪಕ್ಕೆ ಬರುವವರೆಗೆ) ಒಂದು ದೊಡ್ಡ ಪಾತ್ರೆಯಲ್ಲಿ ತುಂಬಿಡುತ್ತಾರೆ. ಹೀಗೆ ಎಲ್ಲಾ ಮನೆಗಳಿಂದ ಸಂಗ್ರಹಿಸಲ್ಪಟ್ಟ ಕಷಾಯವನ್ನು ಊರ ಹಿರಿಯರು ಮಿಶ್ರ ಮಾಡಿ, ಕಲಕಿದ ನಂತರ ಸೋಸುತ್ತಾರೆ. ಹೀಗೆ ತಯಾರಾದ 'ಪವಿತ್ರ ನೀರ'ನ್ನು ಊರ ಹಿರಿಯರು ಪ್ರತಿಯೊಂದು ಮನೆಗೂ ಹಂಚುತ್ತಾರೆ. ಇದನ್ನು ಒಂದು ಬಾರಿ ಸೇವಿಸಿದರೆ ವರ್ಷಂಪೂರ್ತಿ ಜ್ವರ, ನೆಗಡಿ ಮತ್ತಿತರ ರೋಗಗಳು ಬರುವುದಿಲ್ಲ ಎನ್ನುತ್ತಾರೆ ಗ್ರಾಮಸ್ಥರು. ಹೀಗೆ ಸ್ಥಳೀಯ ಪರಿಸರವನ್ನು ಕದಡದೆ ಜೀವ ವೈವಿಧ್ಯಕ್ಕೆ ಹಾನಿ ಮಾಡದ ಅವರ ಆಚರಣೆಯೂ ನಡೆಯುತ್ತಾ ಬಂದಿದೆ. ಈ ಆಚರಣೆಯ ಸಮುದಾಯಕ್ಕೂ ಕೂಡ 'ಸೃಷ್ಟಿ ಸನ್ಮಾನ' ಪ್ರಶಸ್ತಿ ಲಭಿಸಿದೆ.

ಮಳೆ ನಕ್ಷತ್ರಗಳಾಧಾರಿತ ಅನುಭವ ಜ್ಞಾನ

ಸಂಗ್ರಹ ಲೇಖನ: ಮು.ಲ. ಕೆಂಪೇಗೌಡ, ನಾಗಮಂಗಲ

ರೈತನಿಗೆ ಗೊತ್ತಿರುವ ಹಾಗೆ ಆತ ಕಾಸು ಕೊಟ್ಟು ಕೊಳ್ಳಲಾಗದ, ಬೇಡಿದರೂ ಪಡೆಯಲಾಗದ ವ್ಯವಸಾಯಕ್ಕೆ ಅತ್ಯಗತ್ಯವಾದದ್ದು ಒಂದೇ, ಅದು ಮಳೆ. ಹಾಗಾಗಿಯೇ ಮಳೆ ಮತ್ತು ರೈತನ ನಡುವಿನ ಸಂಬಂಧ ಅಷ್ಟೊಂದು ನಿಕಟ ಹಾಗೂ ಸಂಪೂರ್ಣ. ಆದುದರಿಂದಲೇ ಮಳೆಯ ಅವಲಂಬಿಯಾದ ರೈತ ತನ್ನ ಕಾರ್ಯ ಯೋಜನೆಗಳಿಗಾಗಿ ಮಳೆಯ ಮೇಲೆ ಹಲವಾರು ನಂಬಿಕೆಗಳನ್ನಿಟ್ಟುಕೊಂಡು ಆಚರಿಸುತ್ತಾ ಬಂದಿದ್ದಾನೆ. ಈ ನಂಬಿಕೆಗಳು ಕೇವಲ ಮೂಢನಂಬಿಕೆಗಳಾಗಿರದೇ ಅನಾದಿ ಕಾಲದಿಂದ ಸಂಗಮಿಸಿದ ಅನುಭವಗಳ ತೀರ್ಪಾಗಿದೆ. ಅದಕ್ಕೆಂದೇ ಈ 'ಅನುಭವ ಮಂಟಪ'ದ ಒಳ ಇಣುಕಿ ನೋಡುವ, ನೋಡಿದಷ್ಟನ್ನು ಹೇಳುವ ಪ್ರಯತ್ನ ಇದು.

ಹಬ್ಬ ಮದುವೆ, ಮುಂಜಿ, ಪ್ರಸ್ತ.... ಇತರೆ ಶುಭ ಕಾರ್ಯಗಳಲ್ಲಿ ಮೈಮರೆತ ರೈತ ಇವೆಲ್ಲಾ ಮುಗಿಯುತ್ತಾ ಬಂದಂತೆ ಬಾನೆಡೆಗೆ ಮುಖ ಹಾಕಿ ನಿಲ್ಲುತ್ತಾನೆ. ಸುಗ್ಗಿಯ ಲಾಭ ನಷ್ಟಗಳನ್ನೆಲ್ಲಾ ಮರೆಯುತ್ತಾ ವೈಶಾಖದ ಸಂಭ್ರಮದಲ್ಲಿ ತೇಲಿದ ರೈತ ಜೇಷ್ಠ ಬರುತ್ತಿದ್ದಂತೆ ಸಪ್ಪೆ ಮೊಗ ಮಾಡಿ ಎಂದಿನ ತನ್ನ ಕಾಯಕದೆಡೆಗೆ ಕಣ್ಣಾಯಿಸುತ್ತಾನೆ, ಆಗಸದೆಡೆ ದಿಟ್ಟಿಸುತ್ತಾನೆ.

ಕೃಷಿಕನ ಮಳೆಯ ವರ್ಷ ಪ್ರಾರಂಭವಾಗುವುದು ರೇವ್ತಿ (ರೇವತಿ) ಅಥವಾ ಅಶ್‌ಗುನ್ನಿ (ಅಶ್ವಿನಿ) ಮಳೆ (ನಕ್ಷತ್ರ)ಗಳಿಂದ ಎಂಬುದು ಅವನ ನಂಬಿಕೆ. ರೇವತಿ ಮಾರ್ಚ್ ಕೊನೆಯ ವಾರದಲ್ಲಿ ಪ್ರಾರಂಭವಾಗುತ್ತದೆ. ಏಪ್ರಿಲ್ ಎರಡನೇ ವಾರದಲ್ಲಿ ಪ್ರಾರಂಭವಾಗುವ ಅಶ್‌ಗುನ್ನಿ ಮಳೆ ಬಿದ್ದಿದ್ದಾದರೆ ತೆಂಗಿನ ಫಲ ಕಡಿಮೆ ಎಂಬುದು ನಮ್ಮವರ (ಅಪ) ನಂಬಿಕೆ. ಅದೇ ಸಮಯದಲ್ಲಿ ಹೂ ಬಿಡುವ (ವಸಂತ) ತೆಂಗು ರಭಸ ಮಳೆಯಿಂದಾಗಿ ತನ್ನ ಹೂವುಗಳನ್ನು ಕಳಚಿಕೊಳ್ಳುವ ಅಪಾಯವಿರುವುದರಿಂದ ಫಲ ಕಡಿಮೆ ಆಗಲು ಕಾರಣವಿರಬಹುದೆಂದು ಗ್ರಹಿಸಬಹುದು.

ನಂತರ ಹುಟ್ಟುವ ಭರ್ಣಿ (ಭರಣಿ) ಮತ್ತು ಕುರ್ತಿಕೆ (ಕೃತ್ತಿಕ) ಮಳೆಗಳಲ್ಲಿ (ಏಪ್ರಿಲ್ ಕೊನೇ ವಾರದಿಂದ ಮೇ ನಾಲ್ಕನೇ ವಾರದವರೆಗೂ) ಹರಳು ಮತ್ತು ತೊಗರಿ ಬಿತ್ತಿದರೆ ಉತ್ತಮ ಫಸಲೆಂಬುದು ಮತ್ತೊಂದು ನಂಬಿಕೆ ಹಾಗೂ ಆಚರಣೆ. ನಂತರ ಬರುವುವು ರೋಹಿಣಿ ಮತ್ತು ಮೃಗಶಿರ.

ಇವಾದ ಮೇಲೆ ಆದ್ರೆ (ಆರ್ದ್ರಾ) ಮಳೆ. ಆದ್ರೆ ಗುಡುಗಿದರೆ ಆರು ಮಳೆಗಳಲ್ಲಿ ಮಳೆ ಇಲ್ಲ. ಈ ಮಳೆ ಮುಂದಿನ ಏಳು ಮಳೆಗಳ ಗರ್ಭ ತಿನ್ನುತ್ತದೆಯಂತೆ (ಇದಕ್ಕೆ ಹವಾಮಾನ ಇಲಾಖೆಯವರು ಉತ್ತರಿಸಬೇಕು).

ದೊಡ್ಡುಸುಲ (ಪುನರ್ವಸು) ಮತ್ತು ಚಿಕ್ಕುಸುಲ (ಪುಷ್ಯ) ಮಳೆಗಳಲ್ಲಿ ರಾಗಿ ಬಿತ್ತಿದರೆ ಉತ್ತಮ (ಜುಲೈ ಮೊದಲ ವಾರದಿಂದ ಆಗಸ್ಟ್ ಮೊದಲವಾರದವರೆಗೂ). ಆದರೆ ಮಳೆ ಕೈಕೊಟ್ಟರೆ ಮುಂಬರುವ ಆಶ್ಲೆ (ಆಶ್ಲೇಷ) ಮತ್ತು ಮಬ್ಬೆ (ಮುಖ) ಮಳೆಗಳವರೆಗೂ (ಸೆಪ್ಟೆಂಬರ್ ಪ್ರಥಮ ವಾರ) ರಾಗಿ ಬಿತ್ತಬಹುದಂತೆ. ಆದರೆ ಮಳೆ ಬಂದರೆ ಯಾವ ಮಳೆಯಲ್ಲಾದರೂ ಬಿತ್ತದೇ ಬಿಡುವವನಲ್ಲ. ಭೂಮಿ ಹದವಿದ್ದರೆ ಯಾವಾಗ ಬೇಕಾದರೂ ಬಿತ್ತಬಹುದು.

'ಆಶ್ಲೆ ಮಳೆ ಹೊತ್ತಿಗೆ ಹಸಿರು ಮೇಯಬೇಕು'. ದೊಡ್ಡು ಸುಲ, ಚಿಕ್ಕು ಸುಲ ಮಳೆಗಳಾದರೆ ಮಾತ್ರ ದನ, ಕರು, ಕುರಿ, ಆಡುಗಳು ಆಶ್ಲೆ ಮಳೆಗೆ ಹಸಿರು ಮೇಯಲು ಸಾಧ್ಯ. ಇನ್ನೂ ಮಬ್ಬೆ ಮಳೆ "ಆದ್ರೆ ಮಗೆ ಹೋದ್ರೆ ಹೊಗೆ"ಯಂತೆ. ಅಂದರೆ ಇದು ಹುಯ್ಯಲೇ ಬೇಕಾದ ಮಳೆ. ಹುಯ್ಯದೇ ಹೋದುದೇ ಆದರೆ ಕೃಷಿಕನ ಗೋಳು ಹೇಳತೀರದು.

'ಮಬ್ಬೆ ಬಿಟ್ಟು ಉಬ್ಬೆ ಹೊತ್ತಿಕೊಂಡು' ಬರುತ್ತಾಳೆ ಗೌರಿ. ಗೌರಿ ತಿಂಗಳು ಆರಂಭ ಉಬ್ಬೆ (ಪಬ್ಬ) ಮಳೆಯ ಪ್ರಾರಂಭದೊಂದಿಗೆ. ಗಣೇಶನ ಹಬ್ಬ ಮತ್ತು ಅಂದೇ ಅಗಸರಿಗೆ ಉಬ್ಬೆ ಕಟ್ಟೋ ಹಬ್ಬ (ಬೇಯಿಸಿ ಕಟ್ಟುವುದು).

ಉಬ್ಬೆಯ ಉತ್ತರಾಧಿಕಾರಿ ಉತ್ರೆ (ಉತ್ತರ). 'ಉತ್ರೆ ಮಳೇಲಿ ಉತ್ತಿದ ಎತ್ತನ್ನು ನೀರಿಗೆ ಬಿಡಬೇಕು' ಎಂಬುದು ನಿಶಿದ್ಧ. ಈ ಸೆಪ್ಟೆಂಬರ್ ತಿಂಗಳ ಬಿಸಿಲ ಕಾವನ್ನು ಯಾವ ಪ್ರಾಣಿಯಾದರೂ ತಡೆಯಲಾದೀತೇ? ಅದರಲ್ಲೂ ಉತ್ತಿದ ಎತ್ತು?!

'ಹತ್ತದ (ಹಸ್ತ) ಮಳೆ ಎತ್ತಿಂದಲಾದರೂ ಬಂದು ಊದೇ ಹೋಗುತ್ತೇನೆಂದು' ಸಂಕಟದಲ್ಲಿ ಒಕ್ಕಲಿಗನಿಗೆ ಮಾತು ಕೊಟ್ಟ ಭರವಸೆಯ ದಾತ ಈತ. ಇವನಲ್ಲಿ ರೈತನಿಗೆ ಎಲ್ಲಿಲ್ಲದ ಭರವಸೆ.

'ಹತ್ತ'ನ ಹಿಂದೆ ಹುಟ್ಟಿದೋಳು 'ಕುಂಡ್ಚಿತ್ತೆ' (ಕುರುಡು ಚಿತ್ತೆ-ಚಿತ್ತ). ಈಕೆ ಕಣ್ಣು ಕಾಣದ ಕುರುಡಿ. "ಎಲ್ಲಿ ಬೇಕೋ ಅಲ್ಲೆಲ್ಲಾ, ಶಬ್ಧ ಕೇಳಿ ಕೇಳಿದೆಡೆಯೆಲ್ಲಾ ಸುರೀತಾಳೆ" ಪಾಪ! ನಮ್ಮ ಹಿರೀಕರು (ಹಿರಿಯರು) ಸಿಕ್ಕ ಅವಕಾಶ ಬಿಟ್ಟು ಕೊಟ್ಟಾರೆಯೇ! ತಮಟೆ ಬಡಿದು ಕರೆಯುತ್ತಿದ್ದರಂತೆ! ಈ ಕುರುಡು ದೇವಿಯನ್ನ. ಆಕೆ ಬಂದಳೋ ಬಿಟ್ಟಳೊ ನಾ ಕಾಣೆ.

ಹುಳು, ಕೀಟಗಳಿಗೆ "ಮುತ್ತು ಕೊಟ್ಟು ಸಾಕುವುದು" ಮುತ್ತಿನ ಸ್ವಾತಿ (ಸ್ವಾತಿ)ಯ ದುರ್ದೈವ. ಏನು ತಾನೆ ಮಾಡ್ಯಾಳು? ಅದು ಅವಳ ಆದ್ಯ ಕರ್ತವ್ಯ. (ಈ ಸಮಯದಲ್ಲಿ ಕೀಟಗಳ ಹಾವಳಿ ಹೆಚ್ಚುವುದನ್ನು ಗಮನಿಸಬಹುದು) ಈ ಮಾರಿಯ ಮೇಲೆ ರೈತನಿಗೆ ಕಡುಗೋಪ.

ಹೆಚ್ಚಿದ ಜೀವ ಘಾತುಕರು ಎಂದಾದರೂ ಒಂದು ದಿನ ಕೊನೆಗೊಳ್ಳಲೇಬೇಕಲ್ಲವೇ. ಅದಕ್ಕೆಂದೇ ಧರೆಗಿಳಿವವಳು 'ವಿಷ್ಸಾತಿ' (ವಿಷ ಸ್ವಾತಿ = ವಿಶಾಖ) ವಿಷ ಹಾಕಿ ಕೊಲ್ಲುತ್ತಾಳೆ. ಬಹುತೇಕ ಹುಳುಗಳು ಈ ಸಮಯದಲ್ಲಿ ಕೋಶಾವಸ್ಥೆಗೆ ಒಳಪಡುತ್ತವೆ.

ಅನುರಾಜ ಮತ್ತು 'ಆನ್‌ಗಂಪ್ಲೆ' (ಅನರಾಧ ಮತ್ತು ಜೇಷ್ಠ) ಮಳೆಗೆ ಆನೆಯಂತಹವು ನಡುಗಬೇಕು (ಸೆಪ್ಟೆಂಬರ್ ಮೂರನೇ ವಾರದಿಂದ ಡಿಸೆಂಬರ್ ಮೂರನೇ ವಾರದವರೆಗೆ) ಮತ್ತೆ ಮನುಷ್ಯನ ಪಾಡೇನು?.

ನಂತರದವು ಮೂಲದ ಮಳೆಗಳು. ಮೂಲ ಮಳೆಗಳ ನಂತರದ್ದು 'ಅರಿಗೆಡಸಿ' (ಪೂರ್ವಾಷಾಡ) ಕುಯಿಲು ಮಾಡಿ ಅರಿಬಿಟ್ಟು ಬಂದರೆ ಎತ್ತಿಂದಲೋ ಬಂದ ಮಳೆ ಅರಿಯನ್ನು ಕೆಡಿಸಿ ಕೃಷಿಕನ ತಲೆ ಕೆಡಿಸುತ್ತಾಳೆ. ಅರಿಗೆಡಿಸಿದವಳು ಅಷ್ಟಕ್ಕೇ ತೃಪ್ತವಾಗದೆ. 'ಕಣಗೆಡಸಿ'ಯನ್ನು ಕಳಿಸಿಕೊಡುತ್ತಾಳೆ (ಉತ್ತರಾಷಾಢ). ಅವಳು ಬಂದರೆ ಕಣಗುಡಿಸಿ, ರೈತನ ಮನೆಯನ್ನೂ ಗುಡಿಸಿ ಹೋಗುತ್ತಾಳೆ ಎಂಬುದು ನಿರ್ವಿವಾದ (ಕಣದ ಕೆಲಸದ ವೇಳೆ ಮಳೆ ಬಂದರೆ).

ಅನಂತರ ಬರುವ ಶ್ರಾವಣ, ಧನಿಷ್ಠ, ಶತಬಿಷ, ಪೂರ್ವಭಾದ್ರ, ಉತ್ತರಭಾದ್ರಗಳು ರೈತನಿಂದ ದೂರ. ಅದಕ್ಕೆ ಇವರಿಗೆ ಯಾವ ಅಡ್ಡ ಹೆಸರುಗಳನ್ನೂ ರೈತ ಇಡಲಿಲ್ಲ. ಏಕೆಂದರೆ ಅವು ಅವನಿಗೆ ಯಾವ ಭರವಸೆಗಳನ್ನೂ ಕೊಟ್ಟವುಗಳಲ್ಲ ಹಾಗೂ ಯಾವ ನಂಬಿಕೆಗಳನ್ನೂ ಹುಟ್ಟು ಹಾಕಿದವುಗಳಲ್ಲ.

ಸೂಚನೆ: ಆವರಣಗಳಲ್ಲಿರುವ ಪದಗಳು ಮಳೆ ನಕ್ಷತ್ರಗಳ ಮೂಲ ಹೆಸರುಗಳನ್ನು ಸೂಚಿಸುತ್ತವೆ.

ರಾಜಶೇಖರರ ನೂತನ ಬಿತ್ತನೆ ಯಂತ್ರ

2002ನೇ ವರ್ಷ ಮುಂಗಾರಿಯಲ್ಲಿ ಮಳೆ ಅಷ್ಟಕ್ಕಷ್ಟೆಯಾಗಿ ಹಿಂಗಾರಿಯಲ್ಲಿ ಬಿತ್ತನೆ ಮಾಡಲು ಸಕಾಲಕ್ಕೆ ಮಳೆ ಬರಲಿಲ್ಲ. ಜಯಧರ ಹತ್ತಿ ಬೀಜಗಳ ಬಿತ್ತನೆಯ ನಿಗದಿತ ತಥಿ (ಸಮಯ) ದಾಟಿ ಹೋಗಿತ್ತು. ದಿನಾಂಕ: 1-10-2002ರಂದು ಸ್ವಲ್ಪ ಮಳೆಯಾಯಿತು. ಭೂಮಿಯಲ್ಲಿನ ಹದ ನೋಡಲು ಹೋದಾಗ ಹರಿದ ಮಣ್ಣಿನಲ್ಲಿ ಮೇಲಿನ ಮಣ್ಣು ಕೆಸರಿನಂತಿದ್ದರೂ ಅದರ ಕೆಳಗಿನ ಮಣ್ಣು ಒಣಗಿತ್ತು. ಒಂದು ದಿವಸ ಬಿಟ್ಟ ಮೇಲೆ ಮೇಲಿನ ಮಣ್ಣಿನಲ್ಲಿನ ಹಸಿ ಒಳಗೆ ಇಳಿದು ಪೂರ್ತಿ ಹರಿದ ಮಣ್ಣು ಸ್ವಲ್ಪ ಹಸಿಯಾಗಿತ್ತು. ಅಂದರೆ ಕೂರಿಗೆ ಬಳಗುಂಟಿ ಆಡಿದರೆ ಮಣ್ಣು ಆರಿ ಹೋಗಿ ಬಿತ್ತಿದ ಬೀಜ ಹುಟ್ಟುವಂತಿರಲಿಲ್ಲ. ಈ ಪ್ರಕೃತಿ ವಿಕೋಪದೊಂದಿಗೆ ಸೆಣಸಾಡಲು ಬಂದ ಹೊಸ ತಂತ್ರಜ್ಞಾನವೇ ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿಯ ಶ್ರೀ ರಾಜಶೇಖರ ಎಂ. ಮಠದರವರ ಸಮಯೋಚಿತ ಹೊಚ್ಚ ಹೊಸ ತರಹದ ಬಿತ್ತನೆಯ ಅನ್ವೇಷಣೆ. ಈ ತಂತ್ರಜ್ಞಾನದಲ್ಲಿ (ಚಿತ್ರದಲ್ಲಿ ತೋರಿಸಿದಂತೆ) ಕ್ವಾತಾಳಕ್ಕೆ ಸಡ್ಡೆ ಬಟ್ಟಲು ಕಟ್ಟಿ ಬಟ್ಟಲು ಮುಖಾಂತರ ಬಿತ್ತನೆ ಮಾಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಇದರ ಪ್ರಕಾರ ಕ್ವಾತಾಳದ ಎರಡೂ ಸಾಲುಗಳ ಹಿಂದೆ ಚಕ್ಕಡಿ ಗಾಲಿಯ ಗಡ್ಡಿಕಟ್ಟಿನ ಎರಡು ಬಳೆಗಳನ್ನು ಕಟ್ಟಿ ಆ ಬಳೆಗಳ ಹಿಂದೆ ಸಣ್ಣ ಕೊರಡನ್ನು ಕ್ವಾತಾಳದ ಮೇಳಿಗೆ ಕಟ್ಟಿ ಬಿತ್ತನೆ ಮಾಡಿದಾಗ ಬೀಜ ಹುಟ್ಟುವ ಭರವಸೆ ಮೂಡುವುದು.



ಈ ತರಹದ ಬಿತ್ತನೆಯಿಂದ ಬೀಜ ಮೊಳಕೆಯೊಡೆದು ಕೆಲವೊಂದು ದಿವಸ ಬದುಕಿ ಉಳಿಯಲಿಕ್ಕೆ ಭೂಮಿಯಲ್ಲಿನ ತೇವಾಂಶ ಸಹಾಯಕಾರಿಯಾಗುವುದು. ಮಿತವ್ಯಯದ ದೃಷ್ಟಿಯಿಂದ, ಕ್ವಾತಾಳದಿಂದ ಸಡ್ಡೆ ಬಟ್ಟಲು ಮುಖಾಂತರ ಬಿತ್ತುವುದರಿಂದ ಒಂದು ಆಳಿನ ಉಳಿತಾಯವಾಗುವುದಲ್ಲದೇ ಮುಖ್ಯವಾಗಿ ಒಬ್ಬನೇ ಬಿತ್ತುವುದರಿಂದ ಎರಡೂ ಸಾಲಿಗೆ ಬೀಜ ಸಮನಾಗಿ ಹರಿದು ಬಿತ್ತನೆ ಒಂದೇ ತರಹದಾಗುವುದು. ಕ್ವಾತಾಳಕ್ಕೆ ಹಿಂದೆ ಚಕ್ಕಡಿ ಗಾಲಿಯ ಗಡ್ಡಿಕಟ್ಟಿನ ಬಳೆ ಕಟ್ಟಿರುವುದರಿಂದ ಆ ಬಳೆಗಳು ಬಳಗುಂಟೆಯ ಕೆಲಸ ಮಾಡುವುದು. ಇದರಿಂದಾಗಿ ಒಂದು ಜೊತೆ ಎತ್ತು ಮತ್ತು ಒಂದು ಆಳಿನ ಉಳಿತಾಯವಾಗುತ್ತದೆ. ಒಟ್ಟಿನಲ್ಲಿ ಈ ತರಹದ ಬಿತ್ತನೆಯಿಂದ ರೈತನಿಗೆ ಒಂದು ದಿವಸದ ಬಿತ್ತನೆಗೆ ಕನಿಷ್ಠ 500 ರೂಪಾಯಿಗಳ ಉಳಿತಾಯವಾಗುವುದು ಎಂಬುದು ರಾಜಶೇಖರರ ಲೆಕ್ಕಾಚಾರ.

ಮಾಳಯ್ಯನವರ ಕಚ್ಚಾ ರೇಷ್ಮೆಯ ಎಳೆ ತೆಗೆಯುವ ಯಂತ್ರ

ರೇಷ್ಮೆಹುಳದ ಕೋಶವನ್ನು ಆವರಿಸಿರುವ ಕಚ್ಚಾ ರೇಷ್ಮೆಯ ಎಳೆ (flash) ಒಂದು ಬೇಕಾಗಿರದ ವಸ್ತು. ರೇಷ್ಮೆ ಗೂಡುಗಳು ಈ ಕಚ್ಚಾ ರೇಷ್ಮೆಯ ಎಳೆಯಿಂದ ಕೂಡಿದ್ದರೆ ಅದರ ಗುಣಮಟ್ಟ ಕಡಿಮೆಯಾಗಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆ ಬರುತ್ತದೆ. ಮೇಲಾಗಿ ಪ್ರತಿಯೊಂದು ಗೂಡಿನ ಮೇಲಿನ ಕಚ್ಚಾ ರೇಷ್ಮೆಯನ್ನು ತೆಗೆಯುವುದು ಕಠಿಣ ಕೆಲಸವಾದ್ದರಿಂದ ರೈತರು ಅದನ್ನು ಹಾಗೆಯೇ ಮಾರುತ್ತಾರೆ. ಈ ಕಚ್ಚಾ ರೇಷ್ಮೆಯನ್ನು ತೆಗೆಯುವ ಯಂತ್ರಗಳಿದ್ದರೂ ಅವು ಹೆಚ್ಚು ತುಟ್ಟಿಯಾಗಿದ್ದು (ಒಂದಕ್ಕೆ 25,000 ರೂಪಾಯಿಗಳು) ರೈತರಿಗೆ ಸುಲಭವಾಗಿ ನಿಲುಕದಂತಾಗಿರುತ್ತದೆ.



ನಂಜನಗೂಡು ತಾಲ್ಲೂಕಿನ ಆಲಂಬುರುಮುಂಟಿಯ ಶ್ರೀ ಮಾಳಯ್ಯನವರು ಇದಕ್ಕೆ ಪರಿಹಾರೋಪಾಯವಾಗಿ ಒಂದು ಯಂತ್ರವನ್ನು ಕಂಡು ಹಿಡಿದಿದ್ದಾರೆ. ಈ ಕಚ್ಚಾ ರೇಷ್ಮೆ ತೆಗೆಯುವ ಯಂತ್ರಕ್ಕೆ ತಗಲುವ ವೆಚ್ಚ 2,500 ರೂಪಾಯಿಗಳಾಗಿರುತ್ತದೆ. ಮೂರು ಜನ ಕೆಲಸಗಾರರು ಸೇರಿ ಒಟ್ಟು 75 ರಿಂದ 80 ಕೆ.ಜಿ. ರೇಷ್ಮೆ ಗೂಡಿನ ಕಚ್ಚಾ ಎಳೆ ತೆಗೆಯಬಹುದು. ಇದರ ಚಾಲನೆಗೆ ಅರ್ಧ ಹೆಚ್.ಪಿ.ಸಾಮರ್ಥ್ಯವುಳ್ಳ ಮೋಟಾರ್ ಇದ್ದರೆ ಸಾಕು. ಈ ಯಂತ್ರದಿಂದ 100 ಕೆ.ಜಿ. ರೇಷ್ಮೆ ಗೂಡಿಗೆ 250 ರಿಂದ 350 ರೂಪಾಯಿಗಳನ್ನು ಉಳಿಸಬಹುದು. ಈ ಯಂತ್ರವು ರೈತರಿಗೊಂದು ಕೊಡುಗೆಯೆನ್ನಬಹುದು.

ಮಾಧವ ಡೊಂಗ್ರೆಯವರ ಅಡಿಕೆ ಆಯುವ ಉಪಕರಣ

ದಿನಾಲೂ ಅಡಿಕೆ ತೋಟದಲ್ಲಿ ನೆಲದ ಮೇಲೆ ಬಿದ್ದಿರುವ ನೂರಾರು ಕಾಯಿಗಳನ್ನು ಬಗ್ಗಿ ಆಯುವುದು ಅಡಿಕೆ ರೈತರಿಗೆಲ್ಲ ಗೊತ್ತಿರುವ ಸಂಗತಿ. ನೂರಾರು ಕಾಯಿಗಳನ್ನು, ಅದೂ ಬಗ್ಗಿ ಆಯುವುದೆಂದರೆ ವಿಶೇಷವಾಗಿ ವಯಸ್ಸಾದವರಿಗೆ ಅಥವಾ ಬೆನ್ನು ನೋವಿನಿಂದ ನರಳುವವರಿಗೆ ಇದೊಂದು ಆಯಾಸದ ಕೆಲಸ.

ಇದಕ್ಕೆ ತಕ್ಕೋಪಾಯವಾಗಿ ಕಾರ್ಕಳ ತಾಲ್ಲೂಕಿನ ಕೆಸಿನಬೈಲದ ಮಾಧವ ಡೊಂಗ್ರೆಯವರು ಒಂದು ಸುಲಭ ಉಪಕರಣವನ್ನು ಕಂಡು ಹಿಡಿದಿದ್ದಾರೆ. ಈ ಉಪಕರಣದಿಂದ ರೈತರು ಬಗ್ಗದೇ ನಿಂತುಕೊಂಡೇ ನೆಲದ ಮೇಲೆ ಬಿದ್ದಿರುವ ಅಡಿಕೆ ಕಾಯಿಗಳನ್ನು ಆಯ್ದುಕೊಳ್ಳಬಹುದು. ಈ ಉಪಕರಣಕ್ಕೆ ಎರಡು ಚಿಮುಟ (ಇಕ್ಕಳ) ವಿದ್ದು ಸಾಮಾನ್ಯವಾಗಿ ಮುಚ್ಚಿರುತ್ತದೆ. ಹಿಡಿತ (control) ವನ್ನು ಒತ್ತಿದಾಗ ಎರಡು ಚಿಮುಟಗಳು ತೆರೆದುಕೊಳ್ಳುತ್ತವೆ ಮತ್ತು ಸಡಿಲಿಸಿದಾಗ ಕಾಯಿಯನ್ನು ಹಿಡಿದಿಟ್ಟುಕೊಳ್ಳುತ್ತದೆ. ಹೀಗೆ ಹಿಡಿದ ಅಡಿಕೆ ಕಾಯಿಗಳನ್ನು ಒಂದೆಡೆ ಸಂಗ್ರಹಿಸಬಹುದು.

ಸಂಗ್ರಹ ಲೇಖನ: ಎನ್. ಮಹಾಂತೇಶ, ಹಡಗಲಿ

ಈ ಎಲ್ಲಾ ಅನ್ವೇಷಣೆಗಳನ್ನು ತೃತೀಯ NIF ಸ್ಪರ್ಧೆಗೆ ಕಳುಹಿಸಲಾಗಿದೆ.

ದೇಶೀಯ ಜಾಣ್ಮೆ

ಕರಲು ಭೂಮಿಗೆ ಕತ್ತಾಳೆ

ಅತಿ ನೀರು ನಿಲುಗಡೆಯಿಂದ ಅಥವಾ ಮಣ್ಣಿನ ಗುಣ ವಿಶೇಷದಿಂದ ಮಣ್ಣು ಕರಲು ಬಿದ್ದಿದ್ದರೆ (saline) ಆ ಮಣ್ಣಿಗೆ ಕತ್ತಾಳೆ (*Agave sisalana*) ತುಳಿಯುವ ಮೂಲಕ ಆ ಮಣ್ಣನ್ನು ಸಹಜ ಸ್ಥಿತಿಗೆ ತಂದು ಹೆಚ್ಚು ಫಲವತ್ತಾಗಿ ಮಾಡಬಹುದು ಎಂಬುದು ಮಂಡ್ಯ ಜಿಲ್ಲೆಯ ಚಿಕ್ಕ ವೀರಪ್ಪನವರು ನೀಡಿರುವ ಒಂದು ಉಪಯುಕ್ತ ಮಾಹಿತಿ.

ತಿಗಣೆಗೆ ಕಡಿವಾಣ

ಹಳ್ಳಿ ನಗರಗಳೆನ್ನದೆ ಹಳೆ ಮನೆಗಳ ಸಂದಿಗೊಂದಿಗಳಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸುವುದು ತಿಗಣೆಗಳ ಹುಟ್ಟು ಗುಣ. ಈ ತಿಗಣೆ ಸಿಪಾಯಿಗಳ ದಾಳಿ-ದಂಗೆಗಳಿಂದ ಪಾರಾಗಬೇಕಾದರೆ ಸುಲಭ ಪರಿಹಾರಗಳೂ ಕೆಲವಿವೆ. ಅವುಗಳಲ್ಲಿ ಆವರಿಕೆ (*Cassia auriculata*) ಸೊಪ್ಪನ್ನು ಮಲಗುವ



ಆವರಿಕೆ ಸೊಪ್ಪು

ಜಾಗದ ಸುತ್ತ ಜೋಡಿಸುವುದು, ತಟ್ಟೆಯಲ್ಲಿ ನೀರು ತುಂಬಿ ಗೋಡೆಯ ಪಕ್ಕಕ್ಕಿಟ್ಟು ಕಡ್ಡಿಗಳನ್ನು ಬೋರಲಾಗಿ ನಿಲ್ಲಿಸುವುದು ಕೆಲವು ತಂತ್ರಗಳು. ಆವರಿಕೆ ಸೊಪ್ಪು ತಡೆಗೋಡೆ ನಿರ್ಮಿಸಿದರೆ ತಟ್ಟೆಯ ನೀರು ತಿಗಣೆ ಸಾಯಲು ನೆರವಾಗುತ್ತದೆ. ಇದು ಮಂಡ್ಯಾ ಜಿಲ್ಲೆಯ ಲಕ್ಕಣ್ಣಗೌಡ ಮತ್ತಿತರರು ಅನುಸರಿಸುತ್ತಿರುವ ಸುಲಭ ತಂತ್ರ.

ಸಂಗ್ರಹ: ಮು.ಲ. ಕೆಂಪೇಗೌಡ, ನಾಗಮಂಗಲ

ಹಾಗಲ/ಪಡವಲಕಾಯಿ ಇಳುವರಿ ಹೆಚ್ಚಿಸಲು

ಶ್ರೀ ದಾಮೋದರನ್, ತಮಿಳುನಾಡಿನ ಕಾಂಚೀಪುರಂ ಜಿಲ್ಲೆಯ ಎಡೆಯೂರಿನ ಒಬ್ಬ ಉತ್ಸಾಹಿ ಯುವ ರೈತ. ಕಳೆದ ಐದು ವರ್ಷಗಳಿಂದ ರಾಸಾಯನಿಕಗಳನ್ನು ಬಳಸಿ ಕೃಷಿ ಮಾಡುತ್ತಿದ್ದರು. ಕಳೆದ ವರ್ಷ ಚೆನ್ನೈನ ಭಾರತೀಯ ಜ್ಞಾನ ಪದ್ಧತಿಗಳ ಕೇಂದ್ರ ಆಯೋಜಿಸಿದ್ದ ಎರಡು ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಇವರು ಸುಮಾರು 240 ಗುಣಿಗಳಿಗೆ ಹಾಗಲ ಕಾಯಿ ಗಿಡಗಳನ್ನು ನೆಟ್ಟಿದ್ದರು. ಯಥೇಚ್ಛವಾಗಿ ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳನ್ನು ಬಳಸಿದ್ದಲ್ಲದೆ 'ಡಬ್ಬೇಸ್' (Doubbes) ಎಂಬ ಬೆಳೆ ಉತ್ತೇಜಕವನ್ನೂ ಉಪಯೋಗಿಸಿದರು. ಹೀಗೆ ಮಾಡಿದ್ದರಿಂದ ವಾರಕ್ಕೆ 65 ಕೆ.ಜಿ.ಯಷ್ಟು ಇಳುವರಿ ಪಡೆದರು. ಇದೇ ಇಳುವರಿಯನ್ನು ಉಳಿಸಿಕೊಳ್ಳಲು ಮತ್ತೆ ಮತ್ತೆ ಬೆಳೆ ಉತ್ತೇಜಕವನ್ನು ಸಿಂಪಡಿಸಬೇಕಾಗಿ ಬಂತು. ಈ ಸಮಯದಲ್ಲಿ ಇವರು ಕಾರ್ಯಾಗಾರದಲ್ಲಿ ಪಾಲ್ಗೊಂಡರು.

ಅಲ್ಲಿ ಕಲಿತ ಪಾಠ ಉಪಯೋಗಕ್ಕೆ ಬಂದು ಹಾಗಲ ಮತ್ತು ಪಡವಲ ಕಾಯಿಗಳ ಸಾವಯವ ಕೃಷಿಗೆ ಅವರನ್ನು ಇಳಿಯುವಂತೆ ಮಾಡಿತು. ಒಂದು ಕೆ.ಜಿ. ಸಗಣಿಯನ್ನು 5 ಲೀಟರ್ ನೀರಿನಲ್ಲಿ ಬೆರೆಸಿ ಅದಕ್ಕೆ 100 ಗ್ರಾಂ ಇಂಗು ಪುಡಿಯನ್ನು ಹಾಕಿ ಒಂದು ದಿನ ಪೂರ್ತಿ ನೆನೆಯಲು ಬಿಟ್ಟರು. ಮರು ದಿನ ಬೆಳಿಗ್ಗೆ ಒಂದು ಲೀಟರ್ ದ್ರಾವಣವನ್ನು 15 ಲೀಟರ್ ನೀರಿನೊಂದಿಗೆ ಬೆರೆಸಿ ಬೆಳೆಗೆ ಸಿಂಪಡಿಸಿದರು. ಸಿಂಪಡಣೆ ನಂತರ ಒಂದು ಕೆ.ಜಿ. ಇಂಗನ್ನು ಪುಡಿ ಮಾಡಿ 240 ಗಿಡಗಳಿಗೂ ಸಮಾನವಾಗಿ ಹಂಚಿ ಬುಡದ ಬಳಿ ಒಂದೂವರೆ ಅಂಗುಲ ಆಳಕ್ಕೆ ಸೇರಿಸಿ ಗಿಡಗಳಿಗೆ ನೀರು ಹಾಯಿಸಿದರು. ಇದಾದ ಎಂಟು ದಿನಗಳ ನಂತರ ಪ್ರತಿವಾರಕ್ಕೆ ಸರಾಸರಿ 180 ಕೆ.ಜಿ. ಇಳುವರಿ ಪಡೆದರು. ಇದೇ ಕ್ರಮ ಅನುಸರಿಸಿ, ಕಾಯಿಬಿಡದ ಪಡವಲ ಕಾಯಿ ಗಿಡದಿಂದ ದಾಮೋಧರನ್ ಫಲ ಪಡೆಯುವಂತಾದರು

ಮೂಲ: Indegenous Agriculture News, 1(4), Sept. 2002

ಕೂಚು ಭಟ್ಟ

ಹೀಗೊಂದು ಜೀವ ವೈವಿಧ್ಯದ ದಾಖಲೆ

ಡಾ. ವನಜಾ ರಾಮ್‌ಪ್ರಸಾದ್ ನೇತೃತ್ವದ 'ಗ್ರೀನ್ ಪ್ರತಿಷ್ಠಾನ' ತನ್ನೆಲ್ಲಾ ಚಟುವಟಿಕೆಗಳು ಮತ್ತು ಈ ಮೂಲಕ ಸಾಧಿಸಿರುವ ಜೀವ ವೈವಿಧ್ಯ ಸಂರಕ್ಷಣೆ, ಅವುಗಳ ಮಹತ್ವ ಕುರಿತು "Hidden harvests - Community Based Biodiversity Conservation" ಎಂಬ ಪುಸ್ತಕವೊಂದನ್ನು ಹೊರತಂದಿದೆ. ಡಾ. ವನಜಾರಾಮಪ್ರಸಾದ್‌ರವರು ಬರೆದಿರುವ ಈ ಪುಸ್ತಕ ನಮ್ಮ ಪುರಾತನ ಜ್ಞಾನವನ್ನು ಜ್ಞಾಪಿಸುವುದಲ್ಲದೆ 'ಟರ್ಮಿನೇಟರ್' ತಂತ್ರಜ್ಞಾನ ಮುಂತಾದ ಆಧುನಿಕ ಪದ್ಧತಿಗಳನ್ನು ಒಪ್ಪಿಕೊಳ್ಳುವ ಮುನ್ನ ಎಚ್ಚರವಹಿಸಬೇಕು ಎಂಬುದನ್ನು ಮನಗಾಣಿಸುತ್ತದೆ. ಹೀಗೆ ಸಮುದಾಯದ ಜೊತೆಗೂಡಿ ತಾನು ಸಾಧಿಸಿರುವ, ಸಾಧಿಸಬಯಸಿರುವ ಉದ್ದೇಶಗಳನ್ನು ಈ ಪುಸ್ತಕದಲ್ಲಿ ತಿಳಿಸಲಾಗಿದೆ.

ವೆಬ್ ಸೈಟ್‌ನಲ್ಲಿ ಮಾಹಿತಿ

ಸಾವಯವ ಕೃಷಿಯನ್ನು ಬೆಂಬಲಿಸುವ ನಿಟ್ಟಿನಲ್ಲಿ ಧಾರವಾಡದ ಪರ್ಯಾಯ ಕೃಷಿಮಾಧ್ಯಮ ಕೇಂದ್ರವು ಸಾವಯವ ಬೆಳೆಗಾರರ ಉತ್ಪನ್ನಗಳ ಕುರಿತು ತನ್ನ ವೆಬ್ ಸೈಟಿನಲ್ಲಿ ಮಾಹಿತಿ ಪ್ರಕಟಿಸಲು ಉದ್ದೇಶಿಸಿದೆ. ರಾಸಾಯನಿಕ ಗೊಬ್ಬರ ಹಾಗೂ ಕೀಟ ನಾಶಕಗಳನ್ನು ಉಪಯೋಗಿಸದೆಯೇ ವ್ಯವಸಾಯ ಮಾಡುತ್ತಿರುವ ಬೆಳೆಗಾರರು ತಮ್ಮ ಕೃಷಿ ಉತ್ಪನ್ನಗಳ ಕುರಿತು ಕೇಂದ್ರದ ವೆಬ್ ಸೈಟಿನಲ್ಲಿ ಉಚಿತವಾಗಿ ಮಾಹಿತಿ ಪ್ರಕಟಿಸಬಹುದು. ಇದರಿಂದ ಖರೀದಿದಾರರು ನೇರವಾಗಿ ರೈತರನ್ನು ಸಂಪರ್ಕಿಸಲು ಅನುಕೂಲ. ಆಸಕ್ತ ಕೃಷಿಕರು ಸಾವಯವ ಕೃಷಿಯಲ್ಲಿ ತಮ್ಮ ಅನುಭವ, ಬೆಳೆಯುವ ಕೃಷಿ ಉತ್ಪನ್ನ, ವರ್ಷದಲ್ಲಿ ಅವುಗಳು ಲಭ್ಯವಿರುವ ಸಮಯ, ಲಭ್ಯತೆಯ ಪ್ರಮಾಣ, ತಮ್ಮ ಪೂರ್ಣ ವಿಳಾಸ, ದೂರವಾಣಿ ಇತ್ಯಾದಿ ವಿವರಗಳನ್ನು ನಿರ್ದೇಶಕರು, ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ, ಕೃಷ್ಣಾಲಯ, 1ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ನಾರಾಯಣಪುರ, ಧಾರವಾಡ-8, ಅಥವಾ email:ನ caam@sify.com ಈ ವಿಳಾಸಕ್ಕೆ ಒದಗಿಸಲು ಕೋರಲಾಗಿದೆ.

ಪ್ರತಿ ಕ್ರಿಯೆ

ತಾವು ವಿಶ್ವಾಸದಿಂದ ಕಳುಹಿಸಿದ 'ಹಿತ್ತಲ ಗಿಡ' ಚಾತುರ್ಮಾಸಿಕ ಸಂಚಿಕೆ [ಮೇ-ಆಗಸ್ಟ್, 2002] ತಲುಪಿತು. ಆದಕ್ಕಾಗಿ ಧನ್ಯವಾದಗಳು. ನಾನು ಆನೇಕ ಲೇಖನಗಳನ್ನು ಓದಿದೆ. ಜನ ಸಾಮಾನ್ಯರಿಗೆ ಉಪಯೋಗವಾಗುವಂತಹ ಆನೇಕ ಸೂಚನೆಗಳನ್ನು ಸರಳವಾಗಿ ತಿಳಿಸಿದ್ದೀರಿ. ತಾವು ತಮ್ಮದೇ ಆದ ಆನೇಕ ಮಾರ್ಗ ಪ್ರಯೋಗಗಳ ಮೂಲಕ ಜನಗಳು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ಮಾಡುತ್ತಿದ್ದೀರಿ. ತಮಗೆ ಅಭಿನಂದನೆಗಳು.

ವಿ.ಎಸ್. ಕೃಷ್ಣ ಅಯ್ಯರ್, ಮಾಜಿ ಸಚಿವರು, ಶಂಕರ ಪುರಂ, ಬೆಂಗಳೂರು.

ಕೃಷಿ ಮಹೋತ್ಸವ - 2002

ಪೆರಡಾಲದ ಕೃಷಿ ವಿಚಾರ ವಿನಿಮಯ ಕೇಂದ್ರವು ಸಿಂಡಿಕೇಟ್, ಅಡಿಕೆ ಪತ್ರಿಕೆ, ಸಿಂಡಿಕೇಟ್ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮತ್ತು ಭಾರತೀಯ ವಿಕಾಸ ಟ್ರಸ್ಟ್‌ನ ಸಹಯೋಗದೊಂದಿಗೆ ಡಿಸೆಂಬರ್ 25, 2002ರಂದು 'ಕೃಷಿ ಮಹೋತ್ಸವ-2002'ನ್ನು ಏರ್ಪಡಿಸಿದೆ. ಈ ಸಂಧರ್ಭದಲ್ಲಿ ಕೃಷಿ ಯಂತ್ರೋಪಕರಣಗಳು, ಕೃಷಿ ಉತ್ಪನ್ನಗಳು ಮತ್ತು ಇತರ ವಸ್ತುಗಳ ಬೃಹತ್ ವಸ್ತು ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ 'ಕೃಷಿಯಲ್ಲಿ ಉತ್ಪಾದನಾ ವೆಚ್ಚ ಇಳಿಸುವುದು ಹೇಗೆ' ಎಂಬ ವಿಚಾರ ಮಂಥನ ಹಾಗೂ 'ಹೈನುಗಾರಿಕೆಯನ್ನು ಲಾಭದಾಯಕವಾಗಿಸುವುದು ಹೇಗೆ' ಕುರಿತು ವಿಚಾರ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ. ಕ್ಯಾಂಪ್ಕೋದ ಮಾಜಿ ಅಧ್ಯಕ್ಷರು, ಅಡಿಕೆ ಪತ್ರಿಕೆಯ ಪ್ರಕಾಶಕರು ಹಾಗೂ ಪ್ರಗತಿಪರ ಕೃಷಿಕರೂ ಆದ ಶ್ರೀ ಖಂಡಿಗೆ ಶ್ರೀಕೃಷ್ಣ ಭಟ್ ಕೇರ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರೆ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ರಾಜ ಗೋಪಾಲ್‌ರವರು ಅಧ್ಯಕ್ಷತೆವಹಿಸುವರು.

ಸಾವಯವ ಕೃಷಿಕರ ಸಭೆ

'ಸಹಜ ಸಮೃದ್ಧ' ಸಾವಯವ ಕೃಷಿಕರ ಬಳಗವು ಸಾವಯವ ಕೃಷಿಕರ ಹದಿನಾರನೇ ಸಭೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚೆನ್ನಪಟ್ಟಣ ತಾಲ್ಲೂಕು ದಾಸೇಗೌಡನ ದೊಡ್ಡಿಯ ಶ್ರೀ ರಾಮಕೃಷ್ಣಯ್ಯನವರ ಸಾವಯವ ತೋಟದಲ್ಲಿ ನವೆಂಬರ್ 3, 2002ರ ಭಾನುವಾರದಂದು ನಡೆಸಿತು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಖ್ಯಾತ ಸಹಜ ಕೃಷಿಕರಾದ ಶ್ರೀ ಶಿವನಂಜಯ್ಯನವರು ಮತ್ತು ತೆಂಗಿನ ನುಸಿ ಪೀಡೆಗೆ ತಾವು ಚಿಕಿತ್ಸೆ ಮಾಡಿ ಯಶಸ್ವಿಯಾಗಿರುವ ದೊಡ್ಡಬಳ್ಳಾಪುರದ ಶ್ರೀ ಡಿ.ಸಿ. ಶಿವಣ್ಣನವರು ಬಂದಿದ್ದರು. ಈ ಸಂದರ್ಭದಲ್ಲಿ 'ಸಿರಿ ಸಂವೃದ್ಧ' ಪತ್ರಿಕೆಯ ಸಂಪಾದಕರಾದ ಶ್ರೀ ಕೃಷ್ಣಮೂರ್ತಿ ಬೆಳಗೆರೆಯವರು ಸಾವಯವ ಕೃಷಿಗೆ ಕಾವ್ಯ ಸ್ಪರ್ಶ ನೀಡಿದರು.

ಕೃಷಿ ಪತ್ರಿಕೋದ್ಯಮ ಪ್ರಶಸ್ತಿ

ಧಾರವಾಡದ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರವು ಸ್ಥಾಪಿಸಿರುವ ರಾಜ್ಯ ಮಟ್ಟದ 'ಕೃಷಿ ಪತ್ರಿಕೋದ್ಯಮ ಪ್ರಶಸ್ತಿ'ಗೆ 2002ನೇ ಸಾಲಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಶ್ರೀ ರಾಮಕೃಷ್ಣ ಶಾಸ್ತ್ರಿ ಪಡಾರು ಹಾಗೂ ಬೆಂಗಳೂರಿನ ಶ್ರೀ ಜಿ. ಕೃಷ್ಣಪ್ರಸಾದ್ ರವರು ಆಯ್ಕೆಯಾಗಿದ್ದಾರೆ. ಕನ್ನಡದಲ್ಲಿ ಅರ್ಥಪೂರ್ಣ ಕೃಷಿ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಕೃಷಿ ಮಾಧ್ಯಮ ಕೇಂದ್ರ ಕಳೆದ ವರ್ಷದಿಂದ ಎರಡು ವಿಭಾಗಗಳಲ್ಲಿ ಪ್ರಶಸ್ತಿ ನೀಡುತ್ತಿದೆ. ಈ ಬಾರಿ ಕೃಷಿಕರ ವಿಭಾಗದಲ್ಲಿ ಶ್ರೀ ರಾಮಕೃಷ್ಣ ಶಾಸ್ತ್ರಿ ಪಡಾರು ಅವರ "ಅಡಿಕೆ ಕೃಷಿಗೆ ನೀರು ಎಲ್ಲಿಂದ? ಯಾವಾಗ? ಎಷ್ಟು?" (ಅಡಿಕೆ ಪತ್ರಿಕೆ, ನವೆಂಬರ್-ಡಿಸೆಂಬರ್, 2001) ಲೇಖನ ಹಾಗೂ ಮುಕ್ತ ವಿಭಾಗದಲ್ಲಿ ಶ್ರೀ ಜಿ. ಕೃಷ್ಣಪ್ರಸಾದ್ ಅವರ 'ರೈತರ ಭತ್ತದಂಗಳದಲ್ಲಿ ಅರಳಿದ ಮೈಸೂರು ಮಲ್ಲಿಗೆ' (ಪ್ರಜಾವಾಣಿ, 16 ಜನವರಿ, 2002) ಲೇಖನ ಪ್ರಶಸ್ತಿಗೆ ಆಯ್ಕೆಯಾಗಿವೆ. ಪ್ರಶಸ್ತಿಯು ಎರಡು ಸಾವಿರ ರೂಪಾಯಿ ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಸದಾಶಿವಯ್ಯನವರಿಗೆ 'ದೇಶ ಸ್ನೇಹಿ' ಗೌರವ

72ರ ಇಳಿ ವಯಸ್ಸಿನ ವೃದ್ಧ, ತುಮಕೂರಿನ ಶಿವ ಇಂಡಸ್ಟ್ರೀಸ್‌ನ ಸ್ಥಾಪಕ, ದೇಶದ ಮೊದಲ ಪ್ರಧಾನಿ ಜವಹರ್‌ಲಾಲ್ ನೆಹರುರವರಿಂದ ಹೊಗಳಿಸಿಕೊಂಡ ಕೃಷಿ ಯಂತ್ರೋಪಕರಣ ತಯಾರಿಕ ಶ್ರೀ ಸಿ.ಪಿ. ಸದಾಶಿವಯ್ಯನವರ ಸಾರ್ಥಕ ಸೇವೆಗಾಗಿ "ಭಾರತ ಅಭಿವೃದ್ಧಿ ಪ್ರತಿಷ್ಠಾನ" ಎಂಬ ರಾಷ್ಟ್ರಮಟ್ಟದ ಸಂಸ್ಥೆ 2002ನೇ ಸಾಲಿನ "ದೇಶ ಸ್ನೇಹಿ"ಪ್ರಶಸ್ತಿ ನೀಡಿ ಗೌರವಿಸಿದೆ. ತುಮಕೂರಿನ ಮಂಡಿಪೇಟೆಯಲ್ಲಿ 1956ರಲ್ಲಿ ಕೃಷಿ ಯಂತ್ರೋಪಕರಣಗಳ ತಯಾರಿಕಾ ಘಟಕ ಸ್ಥಾಪಿಸಿದ ಇವರು ಓದಿದ್ದು ಕೇವಲ ಮೂರನೇ ತರಗತಿಯವರೆಗೆ ಮಾತ್ರ. ಆದರೆ ಹಲವಾರು ಆಧುನಿಕ ಕೃಷಿ ಉಪಕರಣಗಳನ್ನು ಕಂಡು ಹಿಡಿದು, ತಯಾರಿಸಿ ರೈತರ ಆ ಮೂಲಕ ಭಾರತ ದೇಶದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ಕೊಟ್ಟ ಸ್ಫೂರ್ತಿಯ ಚಿಲುಮೆ ಇವರು.

ಜೀವ ವೈವಿಧ್ಯ ಸಂರಕ್ಷಣೆಗೆ ರಾಷ್ಟ್ರೀಯ ಕಾರ್ಯತಂತ್ರ ಮತ್ತು ಯೋಜನೆಯ ಅಂತಿಮ ಕಾರ್ಯಾಗಾರ:

ಈ ಮೇಲಿನ ಕಾರ್ಯಾಗಾರವು ನವದೆಹಲಿಯಲ್ಲಿ ದಿನಾಂಖ 19-21, ಡಿಸೆಂಬರ್ 2002ರಂದು ಜರುಗಿದ್ದು ಇದರಲ್ಲಿ ಜೀವ ವೈವಿಧ್ಯದ ವಿವಿಧ ಪ್ರಕಾರಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಸಂರಕ್ಷಿಸಿ ಸುಸ್ಥಿರವೂ ಸಮಾನವೂ ಆದ ರೀತಿಯಲ್ಲಿ ಉಪಯೋಗಿಸುವ ಬಗ್ಗೆ ವಿವರವಾದ ಕಾರ್ಯತಂತ್ರ (Strategy) ಮತ್ತು ಕಾರ್ಯಯೋಜನೆ (Action Plan)ಗಳ ಮೊದಲ ಸುತ್ತಿನ ಕರಡು ಪ್ರತಿಯನ್ನು ಹೊರತರಲಾಗಿರುತ್ತದೆ. ಸಂಪ್ರದಾಯಿಕ ಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿರುವ ಕಾರ್ಯಯೋಜನೆ ಈ ಕೆಳಕಂಡಂತಿರುತ್ತದೆ.

- ★ ***ಜೀವ ವೈವಿಧ್ಯದ ಬಗ್ಗೆ ಇರುವ ಸಾಂಪ್ರದಾಯಿಕ ಹಾಗೂ ಸಮುದಾಯ ಜ್ಞಾನವನ್ನು, ಜೀವವೈವಿಧ್ಯ ಶಾಸನದೊಳಗೆ ಸರಿಯಾದ ರೀತಿಯಲ್ಲಿ ಅಳವಡಿಸಿಕೊಂಡು ರಕ್ಷಿಸಬೇಕು ಅಥವಾ ಸಮುದಾಯದ ಬೌದ್ಧಿಕ ಹಕ್ಕು ಬಾಧ್ಯತೆಗಳ ರಕ್ಷಣಾ ನೀತಿಯಡಿಯಲ್ಲಿ (IPR) ನ್ಯಾಯಬದ್ಧವಾಗಿ ರೂಪಿಸಬೇಕು. ಹಾಗೂ ಸಮುದಾಯ ಆಧಾರಿತ ಗ್ರಂಥಗಳನ್ನು ಸಮುದಾಯದ ಜೀವವೈವಿಧ್ಯ ದಾಖಲೆಗಳ ಜಾಲವನ್ನು CBR/PBR ನೇತೃತ್ವದಲ್ಲಿ ನಿರ್ಮಿಸಿ, ಈ ನಿಟ್ಟನಲ್ಲಿ ಕೆಲಸ ಮಾಡುತ್ತಿರುವ ಸಂಶೋಧಕರಿಗೆ ಸಾಂಪ್ರದಾಯಿಕ ಹಾಗೂ ಜ್ಞಾನದ ಅರಿವಿನ ಪರಿಚಯ ಮಾಡಿಸಬೇಕು.***
- ★ ***ಮೇಲೆ ಹೇಳಿರುವ ಸಾಂಪ್ರದಾಯಿಕ ಜ್ಞಾನದ ಉಪಯೋಗವು ಸಮುದಾಯದ ಅಧಿಕಾರ ಕ್ಷೇತ್ರದ ಚೌಕಟ್ಟಿನೊಳಗೇ ಬಳಕೆಯಾಗುವಂತೆ ಎಚ್ಚರ ವಹಿಸಬೇಕು ಮತ್ತು ಲಾಭವು ನ್ಯಾಯ ಬದ್ಧವಾಗಿ ವಿನಿಮಯವಾಗಬೇಕು. (ಈ ಲಾಭವು ಆರ್ಥಿಕ ಲಾಭಕ್ಕೆ ಮಾತ್ರ ಸೀಮಿತವಾಗಿಲ್ಲ.)***

ಸಾಗಾಣಿಕೆಗೊಳಪಟ್ಟಿರುವ ಜೀವ ವೈವಿಧ್ಯದ (Domesticated Biodiversity) ಬಗ್ಗೆ ಸಂಪಾದಕ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ ನೇತೃತ್ವದ ತಂಡ ಒಂದು ವಿವರವಾದ ಕಾರ್ಯತಂತ್ರ ಮತ್ತು ಯೋಜನೆಗಳ ಕರಡು ಪ್ರತಿ ರೂಪಿಸಿರುತ್ತದೆ.

ಈ ಎಲ್ಲವುಗಳ ಬಗ್ಗೆ ವಿವರ ಬೇಕಿದ್ದಲ್ಲಿ http:/sdnp.delhi.nic.inನಲ್ಲಿ ಸಂಪರ್ಕಿಸಬಹುದು.

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಮೂರನೇ ಮತ್ತು ನಾಲ್ಕನೇ ದ್ವೈವಾರ್ಷಿಕ ಸ್ಪರ್ಧೆಗಳು

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು–ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 5,000ದ ಐನೂರು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೂ ಅಷ್ಟೇ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿ ತರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ತ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ತೃತೀಯ ವಾರ್ಷಿಕ ಸ್ಪರ್ಧೆಗೆ ಪ್ರವೇಶ ಕಳುಹಿಸಲು ಫೆಬ್ರವರಿ 28, 2003ರವರೆಗೆ ಅವಕಾಶವಿದೆ. ನಾಲ್ಕನೆಯ ದ್ವೈವಾರ್ಷಿಕ ಸ್ಪರ್ಧೆಗೆ 2003ರ ಮಾರ್ಚ್‌ನಿಂದ 2004 ಆಗಸ್ಟ್‌ವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹಾ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು "ಪೂರ್ವ ಸೂಚಿತ ಸಮ್ಮತಿ" (Prior Informed Concent) ಪಡೆದ ನಂತರವೇ ಮುಂದುವರೆಯಲಾಗುವುದು.

ಪ್ರವೇಶ ಪತ್ರ ಕಳುಹಿಸಬೇಕಾದ ವಿಳಾಸ:

ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು – 560 065 ದೂರವಾಣಿ: 362 0025, email: prakashtnk@yahoo.com

(ಎಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)

ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು:

National Co-ordinator, National Innovation Foundation, Satellite complex, Bangalow No.1, Premchand Nagar Road, Ahmedabad - 380 015, Gujarat, e-main: campaign@nifindia. org

ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ತಳಮಟ್ಟದ ಶೋಧನೆಗಳ ಹುಡುಕಾಟದ ದ್ವಿತೀಯ ಸ್ಪರ್ಧೆ

ಕರ್ನಾಟಕದ ಹೆಮ್ಮೆಯ ಸಾಧನೆ

ಕಳೆದ ಬಾರಿಯಂತೆ ಈ ವರ್ಷವೂ ಕೂಡ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ದ್ವಿತೀಯ ಸ್ಪರ್ಧೆಯಲ್ಲಿ ಕರ್ನಾಟಕ ಹಲವು ಬಹುಮಾನಗಳನ್ನು ತನ್ನದಾಗಿಸಿಕೊಂಡಿರುತ್ತದೆ. ಈ ರೀತಿಯ ತಳಮಟ್ಟದ ಅನುಶೋಧನೆಗಳ ಆಯ್ಕೆಯಲ್ಲಿ ಕರ್ನಾಟಕ ರಾಜ್ಯ ರಾಷ್ಟ್ರದಲ್ಲೇ ತೃತೀಯ ಸ್ಥಾನ ಪಡೆದಿರುವುದನ್ನು ತಿಳಿಸಲು ತುಂಬ ಹೆಮ್ಮೆ ಪಡುತ್ತೇವೆ. ಈ ಬಾರಿ ಕರ್ನಾಟಕದಿಂದ ಪ್ರಶಸ್ತಿ ಪಡೆದಿರುವವರು ಮತ್ತು ಅವರ ಅನುಶೋಧನೆಗಳನ್ನು ಈ ಕೆಳಗೆ ಕೊಡಲಾಗಿದೆ.

ಕ್ರಸಂ	ಹೆಸರು ಮತ್ತು ವಿಳಾಸ	ಅನುಶೋಧನೆ/ಸಾಧನೆ	ಪಡೆದಿರುವ ಪ್ರಶಸ್ತಿ
1.	ಲಿಂಗಮಾದಯ್ಯ, ಚನ್ನಪಟ್ಟಣ, ಬೆಂಗಳೂರು (ಗ್ರಾ)	'ಮೈಸೂರು ಮಲ್ಲಿಗೆ' ಎಂಬ ನೂತನ ಭತ್ತದ ತಳಿಯ ಅಭಿವೃದ್ಧಿ	ರಾಷ್ಟ್ರಮಟ್ಟದ ತಳಿ ವಿಭಾಗದಲ್ಲಿ ಪ್ರಥಮ ಪ್ರಶಸ್ತಿ (ರೂ. ಒಂದು ಲಕ್ಷ ನಗದು)
2.	ಶ್ರೀ ರತ್ನಾಕರ, ಜಯಪುರ, ಚಿಕ್ಕಮಗಳೂರು	ಸುಧಾರಿತ ಜಲವಿದ್ಯುತ್ ಟರ್ಬೈನ್	ರಾಜ್ಯ ಮಟ್ಟದ ಪ್ರಥಮ ಪ್ರಶಸ್ತಿ (ರೂ.50,000 ನಗದು)
3.	ಶ್ರೀ ಹರಿಶ್ಚಂದ್ರ ಶೆಟ್ಟರ್ ಸೊಂಪಾಡಿ, ದಕ್ಷಿಣ ಕನ್ನಡ	ಅಂಟುರಹಿತ ಹಲಸಿನ ತಳಿ 'ಸೊಂಪಾಡಿ' ಯ ಅಭಿವೃದ್ಧಿ	ರಾಷ್ಟ್ರಮಟ್ಟದ ತಳಿ ವಿಭಾಗದಲ್ಲಿ ತೃತೀಯ ಪ್ರಶಸ್ತಿ (ರೂ.25,000 ನಗದು)
4.	ಶ್ರೀ ಎಂ.ಎಸ್.ವಿ. ನಾಯ್ಡು, ಬನಶಂಕರಿ, ಬೆಂಗಳೂರು	ವಿನೂತನ ಉಪಾಯಗಳು	ರಾಷ್ಟ್ರಮಟ್ಟದ ವಿನೂತನ ಉಪಾಯಗಳು ವಿಭಾಗದಲ್ಲಿ ತೃತೀಯ ಪ್ರಶಸ್ತಿ (ರೂ.10,000 ನಗದು)
5.	ಶ್ರೀ ಪಿ. ನಾರಾಯಣ ಭಟ್, ಪೆಲತಡ್ಕ, ದಕ್ಷಿಣ ಕನ್ನಡ	ಅಧಿಕ ಇಳುವರಿ ಕೊಡುವ ಕುಬ್ಜ ಅಡಿಕೆ ತಳಿಯ ಅಭಿವೃದ್ಧಿ	ರಾಷ್ಟ್ರಮಟ್ಟದ ತಳಿ ವಿಭಾಗದಲ್ಲಿ ಸಮಾಧಾನಕರ ಪ್ರಶಸ್ತಿ (ರೂ.5000 ನಗದು)
6.	ಶ್ರೀ ಜೋಸೆಫ್, ದಕ್ಷಿಣ ಕನ್ನಡ	ತೆಂಗು ಮತ್ತು ಅಡಿಕೆ ಮರ ಹತ್ತುವ ಸಾಧನ	ರಾಷ್ಟ್ರಮಟ್ಟದ ಕೃಷಿ ಯಂತ್ರ ವಿಭಾಗದಲ್ಲಿ ಸಮಾಧಾನಕರ ಪ್ರಶಸ್ತಿ (ರೂ.5000 ನಗದು)
7.	ಹಿತ್ತಲಗಿಡ ಬಳಗ/PRITVI ಸಂಸ್ಥೆ, ಬೆಂಗಳೂರು	ರಾಜ್ಯಮಟ್ಟದಲ್ಲಿ ಅತೀ ಹೆಚ್ಚು ಉನ್ನತ ಮಟ್ಟದ ಅನುಶೋಧನೆಗಳನ್ನು ಗುರುತಿಸಿರುವುದು	ರಾಷ್ಟ್ರಮಟ್ಟದಲ್ಲಿ ಶೋಧಕರ ಪ್ರಥಮ ಪ್ರಶಸ್ತಿ (ರೂ. 50,000 ನಗದು)



ಈ ಮೇಲ್ಕಂಡ ವಿಜೇತರನ್ನು ಕಳೆದ ಡಿಸೆಂಬರ್ ಹದಿನೇಳರಂದು ದೆಹಲಿಯ ಒಂದು ಭವ್ಯ ಸಮಾರಂಭದಲ್ಲಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಖಲಾಂ ಇವರಿಂದ ಸನ್ಮಾನಿಸಲಾಗಿರುತ್ತದೆ. ಈ ಸಂದರ್ಭದಲ್ಲಿ ಪ್ರೊ. ಅನಿಲ್ ಗುಪ್ತ, ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಗಳಾದ ಪ್ರೊ. ವಿ.ಎಸ್. ರಾಮಮೂರ್ತಿ ಮತ್ತು ಡಾ. ಆರ್.ಎ. ಮಶೇಲ್ಕರ್ ಅವರು ಬಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾನ್ಯ ರಾಷ್ಟ್ರಪತಿಗಳು ಈ ಅಸಾಮಾನ್ಯ ಅನುಶೋಧಕರೊಡನೆ ಕೆಲ ಕಾಲ ಕಳೆದಿದ್ದಲ್ಲದೆ ಅವರನ್ನು ತಮ್ಮ ಭವನದಲ್ಲಿ ಒಂದು ಚಹಾ ಕೂಟಕ್ಕೂ ಆಹ್ವಾನಿಸಿದ್ದರು. ಇದು ಈ ಎಲ್ಲಾ ತಳಮಟ್ಟದ ಅನುಶೋಧಕರಿಗೆ ಸಂದ ವಿಶೇಷ ಗೌರವವಾಗಿರುತ್ತದೆ.

ಪತ್ರಿಕೆ ನೋಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...

....

....

....

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph: 080-3620025, 8560267(R)
email: hittalu@bgl.vsnl.net.in and prakashtnk@yahoo.com

Printed by Sri. S. Sridhar, Published by Smt. K. Meenakshi (Owner). Printed at "Navabharath Enterprises" No.10, Sirur Park `B' Street, Sheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi